ಕರ್ನಾಟಕ

# ಸ್ಕೌಟ್ ಮತ್ತು ಗೈಡ್

ಮಾಸ ಪತ್ರಿಕೆ

Karnataka

# Scout & Guide

Monthly Magazine


Vol -67 Issue-4 April 2026 Pages: 28 Annual Subscription: ₹ 200/-

ಸಂಪುಟ: 67 ಸಂಚಿಕೆ: 4 ಏಪ್ರಿಲ್-2026 ಪುಟಗಳು: 28 ವಾರ್ಷಿಕ ಚಂದ ರೂ. 200/-




ಡಾ. ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಇವರು ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿಗೆ ಭಾಜನರಾಗಿರುವ ಪ್ರಯುಕ್ತ ಏಪ್ರಿಲ್ 3, 2026 ರಂದು ಬೆಂಗಳೂರಿನ ರಾಜ್ಯ ಕೇಂದ್ರ ಕಛೇರಿಯ "ಕೊಂಡಜ್ಜಿ ಬಸಪ್ಪ ಭವನ"ದಲ್ಲಿ ನಡೆದ ಅಭಿನಂದನಾ ಸಮಾರಂಭದ ಉದ್ಘಾಟನಾ ಕಾರ್ಯಕ್ರಮದಲ್ಲಿ ಶ್ರೀ ಯು.ಟಿ. ಖಾದರ್, ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ ಹಾಗೂ ಹೆಚ್ಚುವರಿ ರಾಜ್ಯ ಮುಖ್ಯ ಆಯುಕ್ತರು ಭಾ.ಸ್ಕೌ-ಗೈ, ನ್ಯಾಯಮೂರ್ತಿ ಶ್ರೀ ಎನ್. ಸಂತೋಷ್ ಹೆಗ್ಡೆ, ಮಾನ್ಯ ವಿಶ್ರಾಂತ ಲೋಕಾಯುಕ್ತರು, ಶ್ರೀ ಎಸ್. ಸುರೇಶ್ ಕುಮಾರ್, ಮಾನ್ಯ ಶಾಸಕರು ಮತ್ತು ಮಾಜಿ ಶಿಕ್ಷಣ ಸಚಿವರು, ಡಾ. ಗೊ.ರು. ಚನ್ನಬಸಪ್ಪ, ಹಿರಿಯ ಸಾಹಿತಿಗಳು ಹಾಗೂ ಅಧ್ಯಕ್ಷರು, ಪ್ರಕಟಣಾ ಸಮಿತಿ, ಭಾ.ಸ್ಕೌ-ಗೈ, ಡಾ. ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು, ಶ್ರೀ ಕೊಂಡಜ್ಜಿ ಬ ಷಣ್ಮುಖಪ್ಪ, ರಾಜ್ಯ ಉಪಾಧ್ಯಕ್ಷರು, ಶ್ರೀಮತಿ ಗೀತಾನಟರಾಜ್, ರಾಜ್ಯ ಆಯುಕ್ತರು (ಗೈ), ಶ್ರೀ ಹೆಚ್.ಎಂ.ಸಿದ್ದರಾಮಸ್ವಾಮಿ, ರಾಜ್ಯ ಉಪಾಧ್ಯಕ್ಷರು, ಶ್ರೀ ಬಿ.ಎ.ಲಿಂಗಾರೆಡ್ಡಿ, ಜಿಲ್ಲಾ ಕಾರ್ಯದರ್ಶಿ, ಶ್ರೀಮತಿ ಮಂಜುಳಾ ಸಿ., ರಾ.ಸಂ.ಆ. (ಗೈ) ಉಪಸ್ಥಿತರಿದ್ದರು.



20ನೇ ಏಪ್ರಿಲ್ 2026 ರಂದು ಲೋಕಭವನದಲ್ಲಿ ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರು ಹಾಗೂ ಸಂಸ್ಥೆಯ ಪೋಷಕರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಡಾ. ಪಿ.ಜಿ.ಆರ್. ಸಿಂಧ್ಯರವರು ಭೇಟಿ ಮಾಡಿ, ಸಂಸ್ಥೆಯು ಸಂಘಟಿಸಿರುವ ಆಪದ್‌ಮಿತ್ರ ತರಬೇತಿ ಹಾಗೂ ಏಪ್ರಿಲ್ ಮತ್ತು ಮೇ ಮಾಹೆಗಳಲ್ಲಿ ಸಂಘಟಿಸಲಿರುವ ವಿಶೇಷ ಬೇಸಿಗೆ ಶಿಬಿರಗಳ ಬಗ್ಗೆ ಮಾಹಿತಿ ನೀಡಿದರು ಮತ್ತು 2024–25ನೇ ಸಾಲಿನ ರಾಜ್ಯ ಪುರಸ್ಕಾರ ಪ್ರಶಸ್ತಿ ಪ್ರಧಾನ ಸಮಾರಂಭದ ಆಯೋಜನೆಗೆ ಅನುಮತಿಯನ್ನು ಕೋರಲಾಯಿತು. ಶ್ರೀಮತಿ ಗೀತಾ ನಟರಾಜ್, ಶ್ರೀಮತಿ ರಾಧಾ ವೆಂಕಟೇಶ್, ಶ್ರೀ ಎಂ. ಪ್ರಭಾಕರ್ ಭಟ್, ಶ್ರೀ ಕೆ.ಎಚ್. ಜಯರಾಮಯ್ಯ ಇವರುಗಳು ಉಪಸ್ಥಿತರಿದ್ದರು.



ದಿನಾಂಕ:29.04.2026 ರಂದು **Most Rev. Peter Machado ArchBishop** (ಮಹಾಧರ್ಮಾಧ್ಯಕ್ಷರು) ಬೆಂಗಳೂರು ಇವರನ್ನು ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಡಾ ಪಿ.ಜಿ.ಆರ್.ಸಿಂಧ್ಯ ರವರು ಭೇಟಿ ಮಾಡಿ ಶುಭಕೋರಿದರು. ನಂತರ ರಾಜ್ಯದ ಎಲ್ಲಾ ಕ್ರಿಶ್ಚಿಯನ್ ಶಾಲೆಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕಗಳ ಪ್ರಾರಂಬಿಸುವ ಕುರಿತು ಚರ್ಚಿಸಲಾಯಿತು. ರಾಜ್ಯ ಕಾರ್ಯದರ್ಶಿ ಶ್ರೀ ಕೆ.ಗಂಗಪ್ಪ ಗೌಡ, ಶ್ರೀ ಕಾಂತರಾಜ್, ಪಿ.ಆರ್.ಓ., ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ ಪ್ರಭಾಕರ್ ಭಟ್, ಶ್ರೀ ಕೆ.ಹೆಚ್ ಜಯರಾಮಯ್ಯ ಸಂಪರ್ಕಾಧಿಕಾರಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಕರ್ನಾಟಕ ಸ್ಕೌಟ್ ಮತ್ತು ಗೈಡ್
ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide
MONTHLY NEWS MAGAZINE

Vol: 67 Issue: 4 April - 2026



**ಪೋಷಕರು**

ಪಿ.ಜಿ.ಆರ್. ಸಿಂಧ್ಯ

**ಗೌರವ ಅಧ್ಯಕ್ಷರು**

ಡಾ. ಗೊ.ರು. ಚನ್ನಬಸಪ್ಪ

**ಅಧ್ಯಕ್ಷರು**

ಕೊಂಡಜ್ಜಿ ಬಿ. ಷಣ್ಮುಖಪ್ಪ

**ಉಪಾಧ್ಯಕ್ಷರು**

ಡಾ. ಎಂ.ಕೆ. ಶ್ರೀಧರ್

**ಸಂಪಾದಕರು**

ಕೆ. ಗಂಗಪ್ಪಗೌಡ

**ಸಹಸಂಪಾದಕರು**

ಎನ್. ಶ್ರೀನಿವಾಸನ್

**ಸದಸ್ಯರು**

ಮೋಹನ್ ಕೊಂಡಜ್ಜಿ

ಸಿ.ಪಿ. ಪರಮೇಶ್ವರ

ಎಂ.ಎನ್. ಷಡಕ್ಷರಿ

ಸಿ.ವಿ. ತಿರುಮಲರಾವ್

ಡಾ. ಮುಕ್ತಾ ಬಿ. ಕಾಗಲಿ



ಸಂಚಿಕೆಯ ವಾರ್ಷಿಕ ಚಂದಾ ರೂ. 200/-

ವಿದ್ಯಾಸಂಸ್ಥೆ ಹಾಗೂ ಸಂಘ-ಸಂಸ್ಥೆಗಳಿಗೆ

ವಾರ್ಷಿಕ ಚಂದಾ ರೂ. 200/-

ಚಂದಾಹಣವನ್ನು

ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ

ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ

#39, ಅರಮನೆ ರಸ್ತೆ, ಬೆಂಗಳೂರು - 560 001

ಇಲ್ಲಿಗೆ ಕಳುಹಿಸಲು ಕೋರಿದೆ.


## ಒಳಪುಟಗಳಲ್ಲಿ...


- ರಾಜ್ಯ ಮುಖ್ಯ ಆಯುಕ್ತರ ನುಡಿ ...04
- ಮೇ 2026ರ ಮಾಹೆಯ ಕಾರ್ಯಕ್ರಮ ಮತ್ತು ಚಟುವಟಿಕೆಗಳು ...05
- ಸಂಪಾದಕೀಯ ...06
- 2025-26ನೇ ಸಾಲಿನ ದ್ವಿತೀಯ ಪಿ.ಯು.ಸಿ.ಯಲ್ಲಿ ಶೇಕಡ 95 ಕ್ಕೂ ಹೆಚ್ಚು ಅಂಕ ಪಡೆದ ರೋವರ್ಸ್-ರೇಂಜರ್ಸ್‌ಗಳು ...08
- ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ...10
- ಡಾ. ಪಿ.ಜಿ.ಆರ್ ಸಿಂಧ್ಯ ರಾಜ್ಯ ಮುಖ್ಯ ಆಯುಕ್ತರು ಇವರಿಗೆ ಗೌರವ ಡಾಕ್ಟರೇಟ್ ನೀಡಿದ ಸಂದರ್ಭದಲ್ಲಿ ಶ್ರೀಯುತರನ್ನು ಅಭಿನಂದಿಸಿದ ಸಮಾರಂಭ ...11
- ಹಿಮಾಲಯಾ ವೃಕ್ಷಮಣಿ ಪ್ರಮಾಣ ಪತ್ರ ಪ್ರಧಾನ ಸಮಾರಂಭ ...13
- ಯುವ ಆಪದ್ ಮಿತ್ರ ಮತ್ತು ವಿಪತ್ತು ನಿರ್ವಹಣಾ ತರಬೇತಿ ಶಿಬಿರ (ಕೊಡಗು) ...14
- ರಾಷ್ಟ್ರೀಯ ಯುವ ಆಪದ್ ಮಿತ್ರ ಮತ್ತು ವಿಪತ್ತು ನಿರ್ವಹಣಾ ತರಬೇತಿ ಶಿಬಿರ ದಕ್ಷಿಣ ಕನ್ನಡ ...15
- ರಾಜ್ಯ ಮಟ್ಟದ ಸಮುದ್ರತೀರ ಚಾರಣ
- ಸಂಘಟಕರುಗಳ ಸಭೆ ...16
- ರಾಷ್ಟ್ರೀಯ ಯುವ ಆಪದ್‌ಮಿತ್ರ ಹಾಗೂ ವಿಪತ್ತು ನಿರ್ವಹಣಾ ಶಿಬಿರ(ಉಡುಪಿ) ...17
- ರಾಜ್ಯ ಕಾರ್ಯಕಾರಿ ಸಮಿತಿ ಸಭೆ
- ರಾಜ್ಯ ಮಟ್ಟದ ಪೈಪ್ ಬ್ಯಾಂಡ್ ತರಬೇತಿ ಶಿಬಿರ ...18
- ಜಿಲ್ಲಾ ವಾರ್ತೆಗಳು ...19


## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಸ್ಕೌಟ್ಸ್ ಮತ್ತು ಗೈಡ್ಸ್ ಸಾಹಿತ್ಯ ಪುಸ್ತಕಗಳನ್ನು ಓದಲು ಕೆಳಗಿನ Q.R. Code ಹಾಗೂ ಲಿಂಕ್‌ನ್ನು ಉಪಯೋಗಿಸಿ

https://archive.org/details/ServantsOfKnowledge?tab=collection&query=sng.*&sort=-addeddate


080-2226 0017, 2226 7470 | www.bsgkarnataka.in | The Bharat Scouts & Guides-Karnataka



# ರಾಜ್ಯ ಮುಖ್ಯ ಆಯುಕ್ತರ ನುಡಿ

2025–26ನೇ ಸಾಲಿನ ಪಿ.ಯು.ಸಿ ಹಾಗೂ ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಗಮನಾರ್ಹ ಸಾಧನೆತೋರಿರುವುದು ಹೆಮ್ಮೆಯ ಸಂಗತಿ. ಎಲ್ಲಾ ವಿದ್ಯಾರ್ಥಿಗಳಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ತಿಳಿಸುತ್ತಾ, ಅವರ ಭವಿಷ್ಯಉಜ್ವಲವಾಗಿರಲಿ ಎಂದು ಹಾರೈಸುತ್ತೇನೆ. ಇದೇ ಸಂದರ್ಭದಲ್ಲಿ ಈ ಸಾಲಿನಲ್ಲಿ ನಮ್ಮಸ್ಕೌಟ್–ಗೈಡ್ಸ್‌ಗಣತಿ 8.60 ಲಕ್ಷವನ್ನುತಲುಪಿರುವುದು ಅತ್ಯಂತ ಮಹತ್ವದ ಹಾಗೂ ಸಾರ್ವಕಾಲಿಕ ದಾಖಲೆಯಾಗಿದೆ. ಈ ಮೈಲುಗಲ್ಲು ಸಾಧಿಸಲು ಶ್ರಮಿಸಿದ ಪ್ರತಿಯೊಬ್ಬ ಸ್ಕೌಟ್ ಮತ್ತುಗೈಡ್ ಬಂಧುಗಳಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ವಿವಿಧ ಜಿಲ್ಲೆಗಳು ಹಾಗೂ ಸ್ಥಳೀಯ–ಕ್ಲಸ್ಟರ್ ಹಂತಗಳಲ್ಲಿ ಆಯೋಜಿಸಲಾಗುತ್ತಿರುವ ಬೇಸಿಗೆ ಶಿಬಿರಗಳು ನಿರೀಕ್ಷೆಗೂ ಮೀರಿಯಶಸ್ಸುಕಾಣುತ್ತಿದ್ದು, ಭಾಗವಹಿಸಿದ ಮಕ್ಕಳಲ್ಲಿ ಶಿಸ್ತು, ಸ್ವಾವಲಂಭನೆ ಮತ್ತು ಸೇವಾ ಮನೋಭಾವವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಇದು ನಮ್ಮ ಚಳುವಳಿಯ ಸಕ್ರಿಯತೆ ಹಾಗೂ ಪ್ರಭಾವವನ್ನು ಸ್ಪಷ್ಟಗೊಳಿಸುತ್ತಿದೆ. ಈ ವರ್ಷರಾಜ್ಯ ಸಂಸ್ಥೆಯು ವಿವಿಧಜಿಲ್ಲಾ ಸಂಸ್ಥೆಗಳಲ್ಲಿ ಆಯೋಜಿಸಿರುವ ವಿಶೇಷ ಬೇಸಿಗೆ ಶಿಬಿರಗಳಿಗೂ ಮಕ್ಕಳಿಂದ ಉತ್ತಮ ಸ್ಪಂದನೆ ಲಭಿಸುತ್ತಿರುವುದು ನಮಗೆ ಇನ್ನಷ್ಟು ಪ್ರೇರಣೆತಂದಿದೆ.

ಮತ್ತೊಂದು ಸಂತೋಷದ ಸಂಗತಿಎಂದರೆ, ಸ್ಕೌಟ್ಸ್ ಮತ್ತುಗೈಡ್ಸ್ ಗಳಿಗೆ ವಿವಿಧ ಬ್ಯಾಡ್ಜ್ ಗಳನ್ನು ಗಳಿಸಲು ಅನುಕೂಲವಾಗುವ ನಿಟ್ಟಿನಲ್ಲಿ, ಸಂಪನ್ಮೂಲ ವ್ಯಕ್ತಿಗಳ ಮಾರ್ಗದರ್ಶನದಲ್ಲಿ ಪ್ರತಿ ಭಾನುವಾರಆನ್‌ಲೈನ್ ಮೂಲಕ "ಸ್ಕೌಟ್ ಸ್ಕಿಲೋ" ಎಂಬ ವಿನೂತನಕಾರ್ಯಕ್ರಮವನ್ನು ಪ್ರಾರಂಭಿಸಿದೆವು. ಈ ಕಾರ್ಯಕ್ರಮಕ್ಕೆ ಉತ್ತಮ ಸ್ಪಂದನೆದೊರಕಿದ್ದು, ಇದುವರೆಗೆ 50 ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ. ವಿಶೇಷವಾಗಿ 50ನೇ ಕಾರ್ಯಕ್ರಮದಲ್ಲಿ ನಮ್ಮರಾಷ್ಟ್ರೀಯ ಮುಖ್ಯಆಯುಕ್ತರಾದ ಡಾ.ಕೆ.ಕೆ.ಖಂಡೇಲವಾಲ ಅವರು ಹಾಗೂ ನಿರ್ದೇಶಕರಾದ ಶ್ರೀ ಅಮರ್ ಛತ್ರಿ ಅವರು ಭಾಗವಹಿಸಿ ಸಂತೋಷ ವ್ಯಕ್ತಪಡಿಸಿರುವುದು ಈ ಕಾರ್ಯಕ್ರಮದ ಯಶಸ್ಸಿಗೆ ಸಾಕ್ಷಿಯಾಗಿದೆ.

2026ರ ಏಪ್ರಿಲ್ ತಿಂಗಳು ಭಾರತ್ ಸ್ಕೌಟ್ಸ್ ಮತ್ತುಗೈಡ್ಸ್, ಕರ್ನಾಟಕರಾಜ್ಯ ಸಂಸ್ಥೆಗೆ ಚಟುವಟಿಕೆಗಳ ಸಮೃದ್ಧಿ, ಸಂಘಟನಾ ಬಲವರ್ಧನೆ ಹಾಗೂ ಸಮಾಜಮುಖಿ ಕಾರ್ಯಗಳ ಸಾರ್ಥಕತೆಯನ್ನು ಪ್ರತಿಬಿಂಬಿಸಿದ ಸ್ಮರಣೀಯಅವಧಿಯಾಗಿದೆ. ತಿಂಗಳ ಆರಂಭದಲ್ಲೇ ದಿನಾಂಕ:02–04–2026 ರಿಂದ 04–04–2026 ರವರೆಗೆ ಬೆಂಗಳೂರಿನ ರಾಜ್ಯಕೇಂದ್ರಕಚೇರಿಯಲ್ಲಿ ನಡೆದರಾಜ್ಯಮಟ್ಟದ ಸಂಘಟಕರ ಸಭೆ ಅತ್ಯಂತ ಫಲಪ್ರದವಾಗಿದ್ದು, ಮಾನ್ಯ ವಿಧಾನಸಭೆಯ ಸಭಾಧ್ಯಕ್ಷರು ಹಾಗೂ ನಮ್ಮ ರಾಜ್ಯ ಸಂಸ್ಥೆಯ ಅಪರ ಮುಖ್ಯಆಯುಕ್ತರೂ ಆಗಿರುವ ಶ್ರೀ ಯು.ಟಿ.ಖಾದರ್ ಅವರ ಉಪಸ್ಥಿತಿ ಸಭೆಗೆ ವಿಶೇಷ ಮೆರಗು ನೀಡಿತು. ಈ ಸಭೆ ಸಂಘಟನೆಯ ಭವಿಷ್ಯದ ಕಾರ್ಯಯೋಜನೆಗಳಿಗೆ ಸ್ಪಷ್ಟ ದಿಕ್ಕು ನೀಡಿದೆ.

ದಿನಾಂಕ 03–04–2026 ರಂದು ರಾಜ್ಯ ಕೇಂದ್ರ ಕಚೇರಿಯಲ್ಲಿ ನಡೆದ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯೂ ಯಶಸ್ವಿಯಾಗಿ ನೆರವೇರಿತು. ಸಭೆಯಲ್ಲಿ ಭಾಗವಹಿಸಿದ್ದ ಗೌರವಾನ್ವಿತ ಸದಸ್ಯರು ಹಾಗೂ ಪದಾಧಿಕಾರಿಗಳು ವ್ಯಕ್ತಪಡಿಸಿದ ಅಭಿಪ್ರಾಯಗಳು, ನೀಡಿದಅಮೂಲ್ಯ ಸಲಹೆ–ಸೂಚನೆಗಳು ಸಂಘಟನೆಯ ಮುಂದಿನ ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡಿವೆ. ಸಭೆಯಲ್ಲಿಕೈಗೊಂಡ ತೀರ್ಮಾನಗಳನ್ನು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆತರುವಲ್ಲಿ, ಪ್ರಾಮಾಣಿಕ ಪ್ರಯತ್ನಮಾಡಲಾಗುವುದು. ಅದೇ ದಿನ ನಡೆದ ಹಿಮಾಲಯ ವೃಕ್ಷ ಮಣಿದಾರಕರಿಗೆ ಪ್ರಮಾಣ ಪತ್ರ, ಪಿನ್ ಹಾಗೂ ಬೀಡ್ಸ್ ವಿತರಣೆ ಸಮಾರಂಭವೂ ಅರ್ಥಪೂರ್ಣವಾಗಿ ನೆರವೇರಿದೆ. ಅದೇ ಸಂದರ್ಭದಲ್ಲಿ ಗೌರವಡಾಕ್ಟರೇಟ್ ಪುರಸ್ಕೃತನಾದ ನನ್ನನ್ನು ರಾಜ್ಯ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಸನ್ಮಾನಿಸಿದುದು ನನಗೆ ಅತ್ಯಂತ ಹೆಮ್ಮೆಯಕ್ಷಣವಾಗಿತ್ತು. ಮಾನ್ಯ ಸಭಾಧ್ಯಕ್ಷರಾದ ಶ್ರೀಯು.ಟಿ.ಖಾದರ್ ಅವರು, ಮಾಜಿ ಸಚಿವರಾದ ಶ್ರೀ ಸುರೇಶ್‌ಕುಮಾರ್ ಮತ್ತು ನಿವೃತ್ತ ಲೋಕಾಯುಕ್ತರಾದ ಶ್ರೀ ಸಂತೋಷ್ ಹೆಗ್ಡೆ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದು, ಈ ನಾಡಿನ ಸಾಕ್ಷಿಪ್ರಜ್ಞೆ, ಸಾಹಿತಿ ಡಾ.ಗೊ.ರು.ಚನ್ನಬಸಪ್ಪಅವರ ಉಪಸ್ಥಿತಿ, ಈ ಸಮಾರಂಭದ ಮಹತ್ವವನ್ನು ಮತ್ತಷ್ಟು ಹೆಚ್ಚಿಸಿತು.

ಶಾಲಾ–ಕಾಲೇಜುಗಳಿಗೆ ಬೇಸಿಗೆ ರಜೆಇದ್ದರೂ ಸಹ, 08–04–2026 ರಿಂದ 12–04–2026 ರವರೆಗೆ ದೊಡ್ಡಬಳ್ಳಾಪುರದ ಡಾ.ಅನಿಬೆಸೆಂಟ್ ರಾಜ್ಯತರಬೇತಿ ಕೇಂದ್ರದಲ್ಲಿ ತೃತೀಯ ಸೋಪಾನ ಪರೀಕ್ಷಾ ಶಿಬಿರ ಹಾಗೂ ರಾಜ್ಯ ಪುರಸ್ಕಾರ ಪೂರ್ವ ಸಿದ್ದತಾ ಶಿಬಿರ, 13–04–2026 ರಂದು ಶಿವಮೊಗ್ಗದಲ್ಲಿ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತುತೋಟಗಾರಿಕೆ ವಿಶ್ವವಿದ್ಯಾಲಯದ ಸಹಯೋಗದಲ್ಲಿರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ರಾಜ್ಯಮಟ್ಟದ ಕೃಷಿ ಮತ್ತುತೋಟಗಾರಿಕೆ ತರಬೇತಿ ಶಿಬಿರ ಹಾಗೂ ಬೆಂಗಳೂರು ದಕ್ಷಿಣಜಿಲ್ಲೆಯ ವತಿಯಿಮದ 16–04–2026 ರಿಂದ 23–04–2026ರವರೆಗೆ ನಡೆದ ಮೂಲ ಮತ್ತು ಮುಂದುವರೆದ ಶಿಬಿರ ಮತ್ತು 15–04–2026 ರಿಂದ 22–04–2026 ರವರೆಗೆ ನಡೆದ ರಾಜ್ಯಮಟ್ಟದ ರೋವರ್, ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್ ಮೂಲ ತರಬೇತಿ ಶಿಬಿರ ಸೇರಿದಂತೆ ಹಲವಾರು ತರಬೇತಿಗಳು ನಿರಂತರವಾಗಿ ನಡೆದಿವೆ. ಈ ಚಟುವಟಿಕೆಗಳು ಚಳವಳಿಯ ಪ್ರತಿಷ್ಠೆಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ದಿವೆ.

20–04–2026 ರಂದು ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್‌ಗೆಹಲೋಟ್ ಅವರನ್ನು ಭೇಟಿ ಮಾಡಿ, ರಾಜ್ಯಾದ್ಯಂತ ನಡೆಯುತ್ತಿರುವ ಸ್ಕೌಟ್–ಗೈಡ್ ಚಟುವಟಿಕೆಗಳು, ಆಪದ್‌ಮಿತ್ರಯೋಜನೆ, ಬೇಸಿಗೆ ಶಿಬಿರಗಳ ಕುರಿತು ಮಾಹಿತಿಗಳನ್ನು ಅವರ ಗಮನಕ್ಕೆ ತರಲಾಯಿತು. ಜೊತೆಗೆ2024–25ನೇ ಸಾಲಿನ ರಾಜ್ಯ ಪುರಸ್ಕಾರಪ್ರಶಸ್ತಿ ಪ್ರದಾನಸಮಾರಂಭಕ್ಕೆ ದಿನಾಂಕವನ್ನು ನಿಗದಿ ಪಡಿಸುವಂತೆ ಗೌರವಾನ್ವಿತ ರಾಜ್ಯಪಾಲರಲ್ಲಿ ಮನವಿ ಸಲ್ಲಿಸಲಾಯಿತು.

21–04–2026 ರಂದು ಉಡುಪಿಯ ಶ್ರೀ ಕೃಷ್ಣ ಮಠದಲ್ಲಿ ಪರ್ಯಾಯ ಶಿರೂರು ಮಠಾಧೀಶರಾದ ಶ್ರೀ ವೇದವರ್ಧನತೀರ್ಥ ಶ್ರೀಪಾದರ ಆಶೀರ್ವಾದ ಪಡೆಯುವ ಭಾಗ್ಯದೊರಕಿತು. ಇದೇ ಸಂದರ್ಭದಲ್ಲಿ 25–26ನೇ ಸಾಲಿನ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಪರೀಕ್ಷೆಯಲ್ಲಿಉತ್ತಮ ಸಾಧನೆ ಮಾಡಿದ ಪ್ರತಿಭಾವಂತ ಸ್ಕೌಟ್ ಮತ್ತು ಗೈಡ್ ವಿದ್ಯಾರ್ಥಿಗಳನ್ನು ಶ್ರೀಮಠದ ರಾಜಾಂಗಣದಲ್ಲಿ ಗೌರವಿಸುವ ಸಮಾರಂಭದ ಕುರಿತು ಮನವಿ ಮಾಡಲಾಯಿತು. ಉಡುಪಿ ಜಿಲ್ಲಾ ಸಂಸ್ಥೆ ಹಾಗೂ ಶ್ರೀಮಠದ ಸಹಯೋಗದಲ್ಲಿ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸುವ ಆಶಾಭಾವನೆದೊರಕಿದೆ. ಅದೇ ದಿನ ನಮ್ಮ ಚಳುವಳಿಯ ಹಿರಿಯ ನಾಯಕಿಯಾದ ಶ್ರೀಮತಿ ಶಾಂತ ವಿ.ಆಚಾರ್ಯಅವರಿಗೆ WAGGGS Asia Pacific Region ವತಿಯಿಂದ ಪ್ರದಾನವಾದ REGION APPRECIATION AWARD ಅನ್ನು ನೀಡಿಗೌರವಿಸಲಾಯಿತು.

22–04–2026 ರಂದು ಹಾಸನದಲ್ಲಿ ವಿಶ್ವ ಭೂಮಿ ದಿನಾಚರಣೆ ಹಾಗೂ ಏಕಲವ್ಯ ಸೇವಾರತ್ನರಾಷ್ಟ್ರೀಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಅರ್ಥಪೂರ್ಣವಾಗಿ ನೆರವೇರಿತು. ಪರಿಸರ ಸಂರಕ್ಷಣೆ ಮತ್ತು ಸಮಾಜಸೇವೆಯ ಮಹತ್ವವನ್ನು ಸಾರಿದ ಈ ಕಾರ್ಯಕ್ರಮಎಲ್ಲರಿಗೂ ಸ್ಫೂರ್ತಿದಾಯಕವಾಗುವಂತಿದೆ.

ಇದರಜೊತೆಗೆ, ಮಾರ್ಚ್ ತಿಂಗಳಲ್ಲಿ ರಾಜ್ಯಾದ್ಯಂತ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಂದರ್ಭದಲ್ಲಿ ಉಡುಪಿ, ಬಳ್ಳಾರಿ, ಕೊಪ್ಪಳ, ದಾವಣಗೆರೆ ಹಾಗೂ ಮೈಸೂರು ಜಿಲ್ಲೆಗಳ ಪದಾಧಿಕಾರಿಗಳನ್ನು ಭೇಟಿ ಮಾಡಿ, ಸಂಘಟನೆಯ ಪ್ರಗತಿಪರಿಶೀಲನೆ ನಡೆಸುವ ಅವಕಾಶವಾಯಿತು.

ಈ ಎಲ್ಲಾ ಚಟುವಟಿಕೆಗಳು ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಮೂಲ ಮೌಲ್ಯಗಳಾದ ಸೇವೆ, ಶಿಸ್ತು, ನಾಯಕತ್ವ ಹಾಗೂ ಸಮಾಜದ ಬದ್ದತೆಯನ್ನು ಮತ್ತಷ್ಟು ಬಲಪಡಿಸುತ್ತವೆ. ಇಂತಹ ಕಾರ್ಯಕ್ರಮಗಳ ಮೂಲಕ ಯುವಜನರಲ್ಲಿ ಸಕಾರಾತ್ಮಕ ಚಿಂತನೆ ಹಾಗೂ ದೇಶಪ್ರೇಮವನ್ನು ಬೆಳೆಸುವುದು ನಮ್ಮಧ್ಯೇಯವಾಗಿದ್ದು, ಮುಂದೆಯೂ ಇದೇ ಉತ್ಸಾಹ ಮತ್ತು ಸಹಕಾರದೊಂದಿಗೆ ಈ ಚಳುವಳಿ ಇನ್ನಷ್ಟು ಪ್ರಗತಿ ಸಾಧಿಸಲಿದೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸುತ್ತೇನೆ.

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

ಆಹಾರ ದೈವಿಕ ಸಂಪತ್ತು, ಅದನ್ನು ಸಂರಕ್ಷಿಸೋಣ
ಆಹಾರವನ್ನು ಉಳಿಸಿ, ಭವಿಷ್ಯವನ್ನು ಕಾಪಾಡಿ!

# ಮೇ 2026ರ ಮಾಹೆಯ ಕಾರ್ಯಕ್ರಮ ಮತ್ತು ಚಟುವಟಿಕೆಗಳು

| ಕ್ರ. ಸಂ. | ಶಿಬಿರದ ಹೆಸರು | ದಿನಾಂಕ | ಸ್ಥಳ | ಶಿಬಿರದ ಅವಧಿ |
|---|---|---|---|---|
| 1. | ರಾಜ್ಯ ಮಟ್ಟದ ಕಾರ್ಟೂನ್ ಮಾಡುವ ತರಬೇತಿ ಶಿಬಿರ | 03.05.2026 ರಿಂದ 06.05.2026 | ಡಾ|| ಆನಿಬೆಸೆಂಟ್ ಸ್ಕೌಟ್ಸ್-ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ | 4 ದಿನ |
| 2. | ರಾಜ್ಯ ಮಟ್ಟದ ಯೋಗ, ಪ್ರಕೃತಿ ಚಿಕಿತ್ಸೆ ಮತ್ತು ಪೌಷ್ಠಿಕ ಆಹಾರ ಮಾಹಿತಿ ಶಿಬಿರ | 04.05.2026 ರಿಂದ 08.05.2026 | ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಮಹಾವಿದ್ಯಾಲಯ ಉಜಿರೆ, ಬೆಳ್ತಂಗಡಿ ತಾಲ್ಲೂಕು ದಕ್ಷಿಣ ಕನ್ನಡ | 5 ದಿನ |
| 3. | ರಾಜ್ಯ ಮಟ್ಟದ ಗಾಯನ ಶಿಬಿರ | 05.05.2026 ರಿಂದ 09.05.2026 | ಸಸ್ಯಚೇತನ ಸ್ಕೌಟ್ಸ್-ಗೈಡ್ಸ್ ಜಿಲ್ಲಾ ತರಬೇತಿ ಕೇಂದ್ರ ದಡ್ಡಿಕಮಲಾಪುರ, ಧಾರವಾಡ ಜಿಲ್ಲೆ | 5 ದಿನ |
| 4. | ರಾಜ್ಯ ಮಟ್ಟದ ಪಯೋನಿಯರಿಂಗ್ ಹಾಗೂ ಸರ್ವೈವಲ್ ಶಿಬಿರ | 07.05.2026 ರಿಂದ 11.05.2026 | ಕೊಂಡಜ್ಜಿ ಬಸಪ್ಪ ಸ್ಕೌಟ್ಸ್-ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ | 5 ದಿನ |
| 5. | ರಾಜ್ಯ ಮಟ್ಟದ ಪ್ರಕೃತಿ ಅಧ್ಯಯನ ಮತ್ತು ಚಾರಣ ಶಿಬಿರ | 16.05.2026 ರಿಂದ 20.05.2026 | ಕುಮಾರಸ್ವಾಮಿ ವಿದ್ಯಾಲಯ, ಸುಬ್ರಮಣ್ಯ ದಕ್ಷಿಣ ಕನ್ನಡ ಜಿಲ್ಲೆ | 5 ದಿನ |
| 6. | ಈಜು (Swimming) ತರಬೇತಿ ಶಿಬಿರ | 01.05.2026 ರಿಂದ 22.05.2026 | ಬಸವನಗುಡಿ, ಬೆಂಗಳೂರು | 22 ದಿನ |
| 7. | ಕಡಲತೀರ ಚಾರಣ ಶಿಬಿರ | 02.05.2026 ರಿಂದ 05.05.2026 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತೆಂಕನಡಿಯೂರು, ಉಡುಪಿ ಜಿಲ್ಲೆ | 4 ದಿನ |
| 8. | ರಾಜ್ಯ ಮಟ್ಟದ ಆಯುಕ್ತರ ಮೂಲ ಮತ್ತು ಮುಂದುವರೆದ ತರಬೇತಿ ಶಿಬಿರ | 12.05.2026 ರಿಂದ 15.05.2026 | ಕೊಂಡಜ್ಜಿ ಬಸಪ್ಪ ಸ್ಕೌಟ್ಸ್-ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ | 4 ದಿನ |
| 9. | ರಾಜ್ಯ ಮಟ್ಟದ ಎ.ಎಲ್.ಟಿ. ತರಬೇತಿ ಶಿಬಿರ (ಗೈಡ್ ವಿಭಾಗ) | 18.05.2026 ರಿಂದ 23.05.2026 | ಕೊಂಡಜ್ಜಿ ಬಸಪ್ಪ ಸ್ಕೌಟ್ಸ್-ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ಕೊಂಡಜ್ಜಿ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ | 7 ದಿನ |
| 10. | ಕಬ್ ಮಾಸ್ಟರ್ಸ್ / ಸ್ಕೌಟ್ ಮಾಸ್ಟರ್ಸ್ / ಫ್ಲಾಕ್ ಲೀಡರ್ಸ್ / ಗೈಡ್ ಕ್ಯಾಪ್ಟನ್ಸ್ / ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳಿಗೆ ರಾಜ್ಯಮಟ್ಟದ ಮೂಲ ಹಾಗೂ ಮುಂದುವರೆದ ತರಬೇತಿ ಶಿಬಿರ | 20.05.2026 ರಿಂದ 26.05.2026 | ಡಾ|| ಆನಿಬೆಸೆಂಟ್ ಸ್ಕೌಟ್ಸ್-ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ | 7 ದಿನ |
| 11. | ವಿಜನ್ 2034 Vision 2034 | 23.05.2026 ರಿಂದ 26.05.2026 | ಡಾ|| ಆನಿಬೆಸೆಂಟ್ ಸ್ಕೌಟ್ಸ್-ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ | 4 ದಿನ |

# ಸಂಪಾದಕೀಯ



**ವಿದ್ಯಾರ್ಥಿಗಳು Public –ಪರೀಕ್ಷೆಗಳಲ್ಲಿ ಮಾತ್ರ ಅಲ್ಲದೆ Private –ಜೀವನ ಪರೀಕ್ಷೆಗಳಲ್ಲೂ ಯಶಸ್ಸು ಹೊಂದುವಲ್ಲಿ ಮಾರ್ಗದರ್ಶನ ನೀಡುತ್ತಿರುವ ಸ್ಕೌಟ್ಸ್–ಗೈಡ್ಸ್ ವಿಶಿಷ್ಟ–ವಿಶೇಷ–ವಿನೂತನ ಕಾರ್ಯಚಟುವಟಿಕೆಗಳು.**

ಪ್ರತಿ ಶೈಕ್ಷಣಿಕ ವರ್ಷದ ಮಾರ್ಚ್ ಅಂತ್ಯದೊಳಗೆ, ಎಲ್ಲಾ ಪಬ್ಲಿಕ್ ಪರೀಕ್ಷೆಗಳು ಯಶಸ್ವಿಯಾಗಿ ನಿರ್ವಹಿಸಲ್ಪಟ್ಟು, ಏಪ್ರಿಲ್ ಅಂತ್ಯದೊಳಗೆ, ಆ ಎಲ್ಲಾ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಯಶಸ್ಸನ್ನು ಪರಿಗಣಿಸಿ, ಸಂಬಂಧಪಟ್ಟ ಶಿಕ್ಷಣ ಇಲಾಖೆಗಳು ತಮ್ಮ ಜವಾಬ್ದಾರಿಗಳನ್ನು ಮುನ್ನೆಡುಸುವಲ್ಲಿ ಮುನ್ನೆಚ್ಚರಿಕೆ ಕ್ರಮಗಳನ್ನು ಹಮ್ಮಿಕೊಂಡು, ಪ್ರಗತಿಪರ ಚಟುವಟಿಕೆಗಳತ್ತ ಶ್ರಮಿಸುತ್ತಿರುವುದು ಸುವೇದ್ಯ. ಅದರಂತೆ, 2025–26ರ ಶೈಕ್ಷಣಿಕ ವರ್ಷದ, ವಿಶೇಷವಾಗಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಹಂತದ ಪಬ್ಲಿಕ್ ಪರೀಕ್ಷೆಗಳಲ್ಲಿ, ಈ ಹಿಂದಿನ ಸಾಲುಗಳ ಪರೀಕ್ಷೆಗಳ ಫಲಿತಾಂಶಗಳ ಶೇಕಡಾ ಪ್ರಮಾಣಗಳಿಗಿಂತ ಅತಿ ಹೆಚ್ಚು ಪ್ರಮಾಣಗಳಲ್ಲಿ ವಿದ್ಯಾರ್ಥಿಗಳು ಯಶಸ್ಸುಗಳಿಸಿರುವುದು ಸಂಬಂಧಪಟ್ಟವರೆಲ್ಲರಿಗೂ ಬಹಳ ಹರ್ಷದಾಯಕ ಸಂಗತಿ. ಇಂತಹ ಪರೀಕ್ಷೆಗಳಲ್ಲಿ ಶ್ರೇಷ್ಠ ಮಟ್ಟದ ಸಾಧನೆಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಸ್ಕೌಟ್ಸ್–ಗೈಡ್ಸ್‌ಗಳು, ರೋವರ್ಸ್–ರೇಂಜರ್ಸ್‌ಗಳು ಅದ್ವಿತೀಯ ಸಾಧನೆ ಹೊಂದಿರುವುದನ್ನು ಮನಗಾಣಬಹುದಾಗಿದೆ. ಸ್ಕೌಟ್ಸ್–ಗೈಡ್ಸ್ ಚಳವಳಿಯು ವಿದ್ಯಾರ್ಥಿಗಳ ಈ ಅದ್ವಿತೀಯ ಸಾಧನೆಯಲ್ಲಿ, ಅವರು ಸ್ಕೌಟ್ಸ್–ಗೈಡ್ಸ್‌ನಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಮೈಗೂಡಿಸಿಕೊಂಡಿರುವ "ಕೈಲಾದಷ್ಟು ಮಾಡು" **(Do your best)** ಮತ್ತು "ಸದಾ ಸಿದ್ಧನಾಗಿರು" **(Be prepared)** ಈ ಧ್ಯೆಯೋದ್ದೇಶಗಳ ಸಾಕ್ಷಾತ್ಕಾರಗಳು ಬಹಳಷ್ಟು ಪ್ರಭಾವವನ್ನುಂಟುಮಾಡಿರುವುದು ಸುವೇದ್ಯ. ಈ ಪರೀಕ್ಷೆಗಳಲ್ಲಿ ಅತ್ಯುತ್ತಮ ಮತ್ತು ಮಹತ್ವದ ಸಾಧನೆಗೈದ ಎಲ್ಲಾ ವಿದ್ಯಾರ್ಥಿಗಳಿಗೆ , ಅವರ ಸಾಧನೆಯಲ್ಲಿ ವಿಶಿಷ್ಟ ಪ್ರೋತ್ಸಾಹ ನೀಡಿದ ಪೋಷಕ ಬಾಂಧವರಿಗೆ, ಇಲಾಖಾ ಅಧಿಕಾರಿಗಳೆಲ್ಲರಿಗೂ, ಸ್ಕೌಟ್ಸ್ –ಗೈಡ್ಸ್ ಬಾಂಧವರಿಗೂ, ಅನಂತಾನಂತ ಅಭಿನಂದನೆಗಳನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ, ಕರ್ನಾಟಕದ ಪರವಾಗಿ ಸಲ್ಲಿಸಲು ಹರ್ಷಿಸುತ್ತೇನೆ.

ಇಂದು ಶಿಕ್ಷಣವು ಕೇವಲ 4 ಗೋಡೆಗಳ ಮಧ್ಯೆ ನಡೆಯುವ ಕಾರ್ಯಚಟುವಟಿಕೆಗಳಿಗೆ, ಅದರಿಂದ ದೊರೆಯಬಹುದಾದ ಉದ್ಯೋಗಕ್ಕೆ ಸೀಮಿತವಾದ ವಿಷಯ– ಜ್ಞಾನಕ್ಕೆ ಸೀಮಿತವಾಗದೇ, ವಿದ್ಯಾರ್ಥಿಗಳ ಸಾಮರ್ಥ್ಯಗಳನ್ನು ಗುರಿತಿಸಿ, ಅದನ್ನು ಪ್ರಜ್ವಲಿಸುವಂತೆ ಮಾಡುವ ಜವಾಬ್ದಾರಿಯನ್ನು ಹೊಂದಿರುವುದಾಗಿದೆ. **("Education today cannot be restricted to the four walls of a classroom or the narrow goals of Employment, but it should shift from content delivery to the capacity building of the students, from teaching to transformation of them")**

ಈ ಅಮೂಲ್ಯ ಜವಾಬ್ದಾರಿಗಳನ್ನು ಸಾಕಾರಗೊಳಿಸುವಲ್ಲಿ ಶಿಕ್ಷಣ ಇಲಾಖೆಗಳೆಲ್ಲರ ಸಹಕಾರದೊಂದಿಗೆ, ಭಾರತ್ ಸ್ಕೌಟ್ಸ್–ಗೈಡ್ಸ್ ಕರ್ನಾಟಕ ಸಂಸ್ಥೆಯು, ಇದರ ದಳಹಂತ, ಸ್ಥಳೀಯ ಹಂತ, ಜಿಲ್ಲಾ ಹಂತ ಮತ್ತು ರಾಜ್ಯ ಹಂತಗಳಲ್ಲಿ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳಿಗೆ, ಶೈಕ್ಷಣಿಕ ವರ್ಷಪೂರ್ತಿ, ಹಲವಾರು ಕಾರ್ಯಕ್ರಮಗಳನ್ನು, ಚಟುವಟಿಕೆಗಳನ್ನು, ತರಬೇತಿಗಳನ್ನು ನಿರ್ವಹಿಸುತ್ತಿರುವುದು ಸರಿಯಷ್ಟೆ. ಈ ಹಿಂದಿನ ವರ್ಷಗಳಂತೆ, ಈ ಮಾರ್ಚ್ 2026ರ ಅಂತ್ಯದಿಂದ ಮೇ 2026ರ ಅಂತ್ಯದ ವರೆಗೆ ವಿಶೇಷವಾಗಿ ಹಮ್ಮಿಕೊಂಡ ಬೇಸಿಗೆ ಶಿಬಿರಗಳು, ವಿಶಿಷ್ಟ–ವಿಶೇಷ ಬೇಸಿಗೆ ಶಿಬಿರಗಳ ಕಾರ್ಯಚಟುವಟಿಕೆಗಳು, ಯಶಸ್ವಿಯಾಗಿ ನಿರ್ವಹಣೆ ಆಗುತ್ತಿರುವುದು ಶ್ಲಾಘನೀಯ. ಈ ಬೇಸಿಗೆ ಶಿಬಿರಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿ, ತಮ್ಮ ದೈಹಿಕ, ಮಾನಸಿಕ, ಆಧ್ಯಾತ್ಮಿಕ, ನೈತಿಕ, ಸಾಂಸ್ಕೃತಿಕ ಇತ್ಯಾದಿ ಸಾಮರ್ಥ್ಯಗಳನ್ನು ವೃದ್ಧಿಸಿಕೊಳ್ಳುವಲ್ಲಿ ಹಲವು ಹನ್ನೊಂದು ಕಾರ್ಯಕ್ರಮಗಳನ್ನು, ಚಟುವಟಿಕೆಗಳನ್ನು ಹಮ್ಮಿಕೊಂಡು ನಿರ್ವಹಿಸುತ್ತಾ, ಹರ್ಷಿತರಾಗಿ ಸರ್ವರ ಆಧರಾಭಿಮಾನಕ್ಕೆ ಪಾತ್ರರಾಗುತ್ತಿರುವುದು ಶ್ರೇಯಸ್ಕರ ಆಗಿರುವುದು.

ಅಲ್ಲದೆ ರೋವರ್ಸ್–ರೇಂಜರ್ಸ್‌ಗಳಿಗೆ ಮಾನ್ಯ ರಾಜ್ಯ ಮುಖ್ಯ ಆಯುಕ್ತರವರ ವಿಶೇಷ ಆಸಕ್ತಿ, ಕಾರ್ಯಾನುಷ್ಠಾನ ಕ್ರಮಗಳ ಸಲಹೆ, ಸಹಕಾರಗಳಿಂದಾಗಿ 40ಕ್ಕೂ ಹೆಚ್ಚು ವಿಶೇಷ, ವಿಶಿಷ್ಠ ಬೇಸಿಗೆ ಶಿಬಿರಗಳನ್ನು ರಾಜ್ಯದಾದ್ಯಂತ ಹಮ್ಮಿಕೊಂಡಿದ್ದು, ಅವುಗಳು ಯುವ ಶಕ್ತಿಗಳ ಪ್ರಜ್ವಲಿಕೆಗೆ ಬಹಳ ಪ್ರೇರಕವಾಗಿ ನಿರ್ವಹಣೆ ಆಗುತ್ತಾ, ಎಲ್ಲರ ಗಮನ ಸೆಳೆಯುತ್ತಿರುವುದು ಹರ್ಷದಾಯಕ. ಈ ವಿಶೇಷ, ವಿಶಿಷ್ಟ ಬೇಸಿಗೆ ಶಿಬಿರಗಳು, ಯುವಕರ ಸಾಹಿತ್ಯ, ಸಾಹಸಪ್ರಿಯ, ವೈಜ್ಞಾನಿಕ, ವೈಚಾರಿಕ, ಆಧ್ಯಾತ್ಮಿಕ, ಪ್ರಾಕೃತಿಕ, ಸಾಂಸ್ಕೃತಿಕ, ವಿವಿಧ ಧಾಮಿರ್ಕ, ಕೃಷಿ, ಮುಂತಾದ ಶ್ರೇಯೋಭಿವೃದ್ಧಿ ಕಾರ್ಯಗಳ ಬಗ್ಗೆ ಬಹಳಷ್ಟು ಪ್ರಭಾವ ಬೀರುವಂತಹವುಗಳಾಗಿರುವುವು. ಇಂತಹವುಗಳ ಮುಂದುವರೆಕೆಗೆ ಬಹಳಷ್ಟು ಪ್ರೇರಣೆ ದೊರೆತಿರುವುದು ಸ್ಫೂರ್ತಿದಾಯಕ.

**"Knowledge is Power, ideas rule the World"** ಎಂಬುದನ್ನು ಮತ್ತು **"Let noble thoughts come to us from every side"** ಎಂಬುದನ್ನು ಸಾಕ್ಷಾತ್ಕರಿಸುವಲ್ಲಿ, ಭಾರತ್ ಸ್ಕೌಟ್ಸ್–ಗೈಡ್ಸ್ ವಿದ್ಯಾರ್ಥಿಗಳಿಗೆ ಈಗ್ಗೆ ಒಂದು ವರ್ಷದಿಂದ ಪ್ರತಿ ಭಾನುವಾರದಂದು ಬೆಳಗ್ಗೆ 11

ಬೆಳಗ್ಗೆ 11 ರಿಂದ 12 ಗಂಟೆಯವರೆಗೆ "Scouts-Skillo-On Line Webinar" ಗಳನ್ನು, ಆಯ್ದ ಆಶಕ್ತಿದಾಯಕ ಸಾಮರ್ಥ್ಯಗಳ (Skill) ಬಗ್ಗೆ ಪ್ರತಿಭಾನ್ವಿತ ವ್ಯಕ್ತಿಗಳಿಂದ ನಿರ್ವಹಿಸುತ್ತಾ, ಯಶಸ್ವಿಆಗಿ ನಿರ್ವಹಿಸುತ್ತಿರುವುದು ಸರಿಯಷ್ಟೆ. ಇದರ 50ನೇ ವೆಬಿನಾರ್‌ಅನ್ನು ದಿನಾಂಕ:19.04.2026ರ ಭಾನುವಾರದಂದು ಈ ಕಾರ್ಯಚಟುವಟಿಕೆಯ ನೇತೃಗಳಾದ ಮಾನ್ಯ ಡಾ॥ ಪಿ.ಜಿ.ಆರ್.ಸಿಂಧ್ಯರವರ ಅಧ್ಯಕ್ಷತೆಯಲ್ಲಿ ಅರ್ಥಗರ್ಭಿತವಾಗಿ ನಿರ್ವಹಣೆ ಆಗಿರುವುದು ಹರ್ಷದಾಯಕ. ಈ ಸುಸಂದರ್ಭದಲ್ಲಿ ಮಾನ್ಯ ಡಾ॥ ಕೆ.ಕೆ.ಖಂಡೇಲ್‌ವಾಲರವರು ರಾಷ್ಟ್ರೀಯ ಮುಖ್ಯ ಆಯುಕ್ತರು, ಮುಖ್ಯ ಅತಿಥಿಗಳಾಗಿ ಭಾಗವಹಿಸಿ, ಈ ಕಾರ್ಯವನ್ನು ಶ್ಲಾಘಿಸಿ, ಅಭಿನಂದಿಸಿರುವುದು ಮತ್ತು ಶ್ರೀ ಅಮರ್ ಛತ್ರಿರವರು, ನಿರ್ದೇಶಕರು, ರಾಷ್ಟ್ರೀಯ ಸಂಸ್ಥೆರವರು ಅತಿಥಿಗಳಾಗಿ ಭಾಗವಹಿಸಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿರುವುದು ನಮಗೆಲ್ಲಾ ಬಹಳ ಪ್ರೇರಣೆ ಆಗಿರುವುದು. ಜೊತೆಗೆ ಸದರಿ ವೆಬಿನಾರ್‌ನ ಮುಖ್ಯ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಸ್ಕೌಟ್ಸ್–ಗೈಡ್ಸ್ ಚಳವಳಿಯ ಧ್ಯೇಯೋದ್ದೇಶಗಳ ಸಕ್ರಿಯ ಅನುಷ್ಠಾನ, ಎಲ್ಲಾ ಶಾಲಾ–ಕಾಲೇಜುಗಳ ಹಂತಗಳಲ್ಲಿ ಮಾತ್ರ ಅಲ್ಲದೆ ಎಲ್ಲರ ಎಲ್ಲಾ ಪ್ರಜೆಗಳ ಹಂತಗಳಲ್ಲೂ ಆಗಬೇಕೆಂಬುದನ್ನು ಸ್ಪಷ್ಟಪಡಿಸುತ್ತಾ, ಶ್ರೀ ಧರ್ಮೇಂದ್ರಕುಮಾರ್‌ರವರು ನೀಡಿದ ಮಾರ್ಗದರ್ಶನ ಎಲ್ಲರಿಗೂ ಸ್ಫೂರ್ತಿ ನೀಡಿರುವುದು ಸ್ಪಷ್ಟ. ಪ್ರತಿ ಭಾನುವಾರದಂದು ಬೆಳಗ್ಗೆ 11 ರಿಂದ 12ರವರೆಗೆ ನಿರ್ವಹಣೆ ಆಗುತ್ತಿರುವ ಈ ಸ್ಕೌಟ್ ಸ್ಕಿಲೋ ಆನ್‌ಲೈನ್ ವೆಬಿನಾರ್‌ನ ಲಿಂಕ್ ಪಡೆದು, ಸರ್ವರೂ ಭಾಗವಹಿಸಲು ಈ ಮೂಲಕ ವಿನಂತಿಸಿದೆ.

ಒಟ್ಟಿನಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳು ಶೈಕ್ಷಣಿಕ ವರ್ಷದ ಜೂನ್‌ನಿಂದ ಮಾರ್ಚ್‌ವರೆಗೆ ಮಾತ್ರ ಸೀಮಿತವಾಗದೇ, ಮಾರ್ಚ್ ಅಂತ್ಯದಿಂದ ಮೇ ಅಂತ್ಯದವರೆಗೂ ಸ್ಕೌಟ್ಸ್–ಗೈಡ್ಸ್‌ನ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯ ಕಾರ್ಯಕ್ರಮಗಳನ್ನು, ಚಟುವಟಿಕೆಗಳನ್ನು, ತರಬೇತಿಗಳನ್ನು ಸಕ್ರಿಯವಾಗಿ ಮುಂದುವರೆಸುತ್ತಾ, ವಿದ್ಯಾರ್ಥಿಗಳಿಗೆ ನೀಡುವ ಶಿಕ್ಷಣವು ಅವರ ಜ್ಞಾನಾಭಿವೃದ್ಧಿಯ ಶಕ್ತಿಯನ್ನು ಮಾತ್ರ ವೃದ್ಧಿಸುವುದಕ್ಕೆ ಸೀಮಿತವಾಗದೆ, ಅವರ ಬದುಕಿನುದ್ದಕ್ಕೂ, ಅವರಲ್ಲಿ ಕಲಿಯುವ, ಕಲಿತದ್ದನ್ನು ವೃದ್ಧಿಸಿಕೊಳ್ಳುವ ಮತ್ತು ಹೆಚ್ಚು–ಹೆಚ್ಚು ಕಲಿತು ಬದುಕನ್ನು ಸಾರ್ಥಕಗೊಳಿಸುವ ಜೀವನ ಶಿಕ್ಷಣದ ಸಾಮರ್ಥ್ಯಗಳನ್ನು (Life Skill abilities) ಹೊಂದುವಲ್ಲಿ ಭಾರತ್ ಸ್ಕೌಟ್ಸ್ ಗೈಡ್ಸ್ ಸಂಸ್ಥೆ ಸದಾ ಶ್ರಮಿಸುತ್ತಿರುವುದನ್ನು ತಿಳಿಸಲು ಹೆಮ್ಮೆ ಎನಿಸುವುದು. **("we are at cross roads, where education must pivot to nurture not just intellectual ability, but also a life long capacity to learn, unlearn and relearn among students")**

ಏಪ್ರಿಲ್ 2026ರ ಮೇಲ್ಕಂಡ ಎಲ್ಲಾ ಕಾರ್ಯಕ್ರಮ, ಚಟುವಟಿಕೆಗಳು, ತರಬೇತಿಗಳು ಬೇಸಿಗೆ ಶಿಬಿರಗಳು ಮತ್ತು ವಿಶೇಷ–ವಿಶಿಷ್ಟ ಬೇಸಿಗೆ ಶಿಬಿರಗಳು ಯಶಸ್ವಿಯಾಗಿ ನಿರ್ವಹಣೆ ಆಗುವಲ್ಲಿ ಪ್ರೋತ್ಸಾಹಿಸಿ, ಉತ್ಸಾಹ ತುಂಬಿದ ಸರ್ವರಿಗೂ ಅಭಿನಂದನೆಗಳನ್ನು ತಿಳಿಸಬಯಸುತ್ತೇನೆ.

ಸ್ಕೌಟ್ಸ್–ಗೈಡ್ಸ್ ವಂದನೆಗಳೊಂದಿಗೆ

(ಕೆ. ಗಂಗಪ್ಪಗೌಡ)
ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

## ಅಭಿನಂದನೆಗಳು



ಝೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗಲಿರುವ ಸ ರಿ ಗ ಮ ಪ ಲಿಟ್ಲ್ ಚಾಂಪ್ಸ್ 2026 ರಿಯಾಲಿಟಿ ಶೋಗೆ ಮಂಗಳೂರಿನ ಸಂತ ಅಲೋಶಿಯಸ್ ಗೊಂಝಗಾ ಶಾಲೆ ಇಲ್ಲಿನ ಸ್ಕೌಟ್ ವಿದ್ಯಾರ್ಥಿ ಅಶ್ಮಿತ್ ಎ.ಜೆ ಈತನು ಆಯ್ಕೆಯಾಗಿರುತ್ತಾನೆ.

ತನ್ನ ಅಪ್ರತಿಮ ಪ್ರತಿಭೆಯಿಂದ ಹಲವಾರು ವೇದಿಕೆಯಲ್ಲಿ ತನ್ನ ಸ್ವರ ಮಾಧುರ್ಯವನ್ನು ಪ್ರದರ್ಶನ ಮಾಡಿ, ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದು, ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಹಾಗೂ ರಾಜ್ಯ ಮಟ್ಟದ ದೇಶಭಕ್ತಿ ಗೀತಗಾಯನ ಸ್ಪರ್ಧೆಯಲ್ಲಿ ಹಾಡಿ ರಾಜ್ಯ ಮುಖ್ಯ ಆಯುಕ್ತರಾದ ಡಾ. ಪಿ.ಜಿ ಆರ್ ಸಿಂಧ್ಯ ರವರು ಇವನ ಪ್ರತಿಭೆಯನ್ನು ಪ್ರಶಂಶಿಸಿರುತ್ತಾರೆ.

ಸ ರಿ ಗ ಮ ಪ ಲಿಟ್ಲ್ ಚಾಂಪ್ಸ್ ನಿನ್ನ ಪಯಣ ಉತ್ತಮ ರೀತಿಯಲ್ಲಿ ಮೂಡಿಬರಲಿ, ದೇವರ ಅನುಗ್ರಹ ಸದಾ ನಿನ್ನ ಮೇಲಿರಲಿ ಎಂದು ಸಮಸ್ತ ಸ್ಕೌಟ್ಸ್ ಮತ್ತು ಗೈಡ್ಸ್ ಬಂಧು ಮಿತ್ರರ ಪರವಾಗಿ ಶುಭ ಹಾರೈಕೆಗಳು.

– ರಾಜ್ಯ ಕಾರ್ಯದರ್ಶಿ

## 2025-26ನೇ ಸಾಲಿನ ದ್ವಿತೀಯ ಪಿ.ಯು.ಸಿ.ಯಲ್ಲಿ ಶೇಕಡ 95 ಕ್ಕೂ ಹೆಚ್ಚು ಅಂಕ ಪಡೆದ ರೋವರ್ಸ್-ರೇಂಜರ್ಸ್‌ಗಳು



**ANVITHA.R**
MARK - 597 (99.5%) Commerce
SHREE NARAYANA GURU PU COLLEGE MULKI
DAKSHINA KANNADA



**SHRAVANI M**
MARK - 594 - ( 99%) Commerce
EXCELLENT PU COLLEGE
DAKSHINA KANNADA



**SHAMANTH K M**
MARK - 592 - (98.67%) Commerce
EXCELLENT PU COLLEGE
DAKSHINA KANNADA



**PURVI H. POOJARI**
MARK - 592 - ( 98.66%) Commerce
SHREE NARAYANA GURU PU COLLEGE MULKI
DAKSHINA KANNADA



**HRUTHIK M N**
MARK - 592 (98.6%) Commerce
EXCELLENT PU COLLEGE
MOODUBIDRE, DAKSHINA KANNADA



**SHRAVYA .S.K**
MARK - 590 (98.33%) Science
SHREE NARAYANA GURU PU COLLEGE MULKI
DAKSHINA KANNADA



**SAMIKSHA PRAVIN KHOT**
MARK -589 - (98.17%) Commerce
EXCELLENT PU COLLEGE, MOODBIDRI
DAKSHINA KANNADA



**P.V.VIDISHA**
MARK - 589 - ( 98.16%) Science (PCMC)
INDRAPRASTHA PRE-UNIVERSITY COLLEGE,
UPPINANGADY, DAKSHINA KANNADA



**CHINMAYI P**
MARK - 588 - (98%) Commerce
EXCELLENT PU COLLEGE
DAKSHINA KANNADA



**NITHIN D V**
MARK -588 - (98%) Commerce
EXCELLENT PU COLLEGE, MOODUBIDIRE
DAKSHINA KANNADA



**CHIRAG M RAO**
MARK - 587 - (97.8%) SCIENCE PCMC
ST ALOYSIUS PU COLLEGE
DAKSHINA KANNADA



**PRITHVI M PUTHRAN**
MARK - 582 (97%) Commerce
SHREE NARAYANA GURU PU COLLEGE MULKI
DAKSHINA KANNADA

# 2025-26ನೇ ಸಾಲಿನ ದ್ವಿತೀಯ ಪಿ.ಯು.ಸಿ.ಯಲ್ಲಿ ಶೇಕಡ 95 ಕ್ಕೂ ಹೆಚ್ಚು ಅಂಕ ಪಡೆದ ರೋವರ್ಸ್-ರೇಂಜರ್ಸ್‌ಗಳು



**PRAPTHI VIJAY JAIN**
MARK -578 - (96.33%) Commerce
EXCELLENT PU COLLEGE, MOODUBIDIRE
DAKSHINA KANNADA



**MADVITHA B T**
MARK -580 - (96.66%) Commerce
SDM PU COLLEGE, UJIRE
DAKSHINA KANNADA



**SHRAVANI R**
MARK - 579 - (96.5%) Commerce
EXCELLENT PU COLLEGE
DAKSHINA KANNADA



**SRUSHTI DURGA**
MARK - 579 - (96.5%) Commerce
SECTION - RANGER
EXCELLENT PU COLLEGE
DAKSHINA KANNADA



**E C VIKAS**
MARK -576 - (96%) Commerce
SDM PU COLLEGE, UJIRE
DAKSHINA KANNADA



**SANJAN KOTE**
MARK - 574 - (95.67%) Commerce
EXCELLENT PU COLLEGE, MOODUBIDIRE
DAKSHINA KANNADA



**ASHMITA ASHOK SHETTY**
MARK -575 - (95.83%) Science
EXCELLENT MOODUBIDIRE
DAKSHINA KANNADA



**RAKSHA R POOJARY**
MARK - 574 - (95.67%) Commerce
SHREE NARAYANA GURU PU COLLEGE MULKI
DAKSHINA KANNADA



**KHUSHI**
MARK - 574 - ( 95.67%) Commerce
S. D. P. T. P. U. COLLEGE, KATEEL
DAKSHINA KANNADA



**Sathvika**
MARK -572 - (95.33%) Science
Shree Durgaparameshwari Temple
Pre-University College, Kateel,Mulki Taluk



**SHRAVYA S**
MARK - 570 - (95%) Commerce
EXCELLENT PU COLLEGE
DAKSHINA KANNADA



**KRIPAKARA S MUKKA**
MARK -568 - (94.7%) Science
EXCELLENT PU COLLEGE, MOODUBIDIRE
DAKSHINA KANNADA

# ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಹಾಗೂ ಜಿಲ್ಲಾ ಸಂಸ್ಥೆ ಹಾವೇರಿ ಇವರ ಸಹಯೋಗದೊಂದಿಗೆ ದಿನಾಂಕ : 28.03.2026 ರಂದು ರಾಜ್ಯ ಮಟ್ಟದ 115ನೇ ಮಹಿಳಾ ದಿನಾಚರಣೆಯನ್ನು "ಕೊಟ್ಟು ಪಡೆಯೋಣ" ಎಂಬ ಧ್ಯೇಯದೊಂದಿಗೆ ಹಾವೇರಿಯಲ್ಲಿ ಆಚರಿಸಲಾಯಿತು. ಸದರಿ ಕಾರ್ಯಕ್ರಮವನ್ನು ಬೆಳಿಗ್ಗೆ 9 ಗಂಟೆಗೆ ಧ್ವಜಾರೋಹಣದೊಂದಿಗೆ ಪ್ರಾರಂಭಿಸಲಾಯಿತು. ನಂತರ ಶ್ರೀ ಮೋಹನ ದಂಡಿನ, ಉಪನಿರ್ದೇಶಕರು, ಶಾಲಾ ಶಿಕ್ಷಣ & ಸಾಕ್ಷರತಾ ಇಲಾಖೆ ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ಹಾವೇರಿ ಇವರು "ನಾರಿ ಶಕ್ತಿ ನಡಿಗೆ" ಪಥಸಂಚಲನೆಯನ್ನು ಹಸಿರು ನಿಶಾನೆ ತೋರಿಸಿ ಉದ್ಘಾಟಿಸಿ ಶುಭವನ್ನು ಹಾರೈಸಿದರು. ನಂತರ ಭಾಗವಹಿಸಿದ ಎಲ್ಲಾ ಮಹಿಳೆಯರಿಗೆ "ಎಲುಬಿನ ಸಾಂದ್ರತೆ" ಪರೀಕ್ಷೆಯನ್ನು ರೇಣುಕಾ ಸರ್ಜಿದೇವಧರ್ ಆಸ್ಪತ್ರೆ, ಹಾವೇರಿ ಇವರ ಸಹಯೋಗದೊಂದಿಗೆ ಡಾ. ನವೀನ್, ಅರ್ಥೋಪೆಡಿಕ್, ಇವರು ನೇತೃತ್ವವದಲ್ಲಿ ಮತ್ತು ತಂಡದ ಸಹಕಾರದೊಂದಿಗೆ ನಡೆಸಲಾಯಿತು. ಶ್ರೀಮತಿ ಗೀತಾಜಂಬಗಿ, ಜಿಲ್ಲಾ ಆಯುಕ್ತರು (ಗೈಡ್) ಹಾವೇರಿ ಇವರು ಸರ್ವರನ್ನು ಸ್ವಾಗತಿಸಿದರು, ಶ್ರೀಮತಿ ರಾಧಾ ವೆಂಕಟೇಶ್, ಸಹಾಯಕ ರಾಜ್ಯ ಆಯುಕ್ತರು (ಗೈಡ್), ಪ್ರಾಸ್ತವಿಕ ನುಡಿಗಳನ್ನು ನುಡಿದು ದಿನದ ಮಹತ್ವವನ್ನು ತಿಳಿಸಿದರು.

ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ ಶ್ರೀ ವಿಜಯ ಮಹಂತೇಶ್ ದಾನಮ್ಮನವರ, ಮಾನ್ಯ ಜಿಲ್ಲಾಧಿಕಾರಿಗಳು 115ನೇ ಮಹಿಳಾ ದಿನಾಚರಣೆಯನ್ನು ದೀಪ ಬೆಳಗಿಸುವುದರೊಂದಿಗೆ ಉದ್ಘಾಟಿಸಿ ಮಾತನಾಡುತ್ತಾ ಕಾರ್ಯಕ್ರಮದ ಆಲೋಚನೆಗೆ ರಾಜ್ಯ ಮುಖ್ಯ ಆಯುಕ್ತರು & ಜಿಲ್ಲಾ ಸಂಸ್ಥೆ ಹಾವೇರಿ ಪದಾಧಿಕಾರಿಗಳಿಗೆ ಅಭಿನಂದಿಸಿದರು. ಶ್ರೀಮತಿ ಆಶಾ ಪ್ರಸನ್ನಕುಮಾರ್, ಉಪಾಧ್ಯಕ್ಷರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕಇವರು ಮಾತನಾಡಿ ಹೆಣ್ಣಿನ ಮಹತ್ವ, ತ್ಯಾಗ, ಪ್ರತಿಯೊಬ್ಬರ ಜೀವನ ನಿರ್ವಹಣೆ & ಸಮಾಜದಲ್ಲಿ ಮಹಿಳೆಯ ಮಹತ್ವವಾದ ಪಾತ್ರವನ್ನು ಪ್ರಶಂಸಿದರು.



ಡಾ. ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಇವರು ಮಾತನಾಡಿ ಮಾನ್ಯ ಜಿಲ್ಲಾಧಿಕಾರಿಗಳು & ಅಧ್ಯಕ್ಷರು ಜಿಲ್ಲಾ ಸಂಸ್ಥೆ ಹಾವೇರಿ ಇವರ ಸಹಾಯ ಸಹಕಾರ ಮತ್ತು ಮಾರ್ಗದರ್ಶನಕ್ಕೆ ಕೃತಜ್ಞತೆಗಳನ್ನು ಸಲ್ಲಿಸಿದರು. ಕಾರ್ಯಕ್ರಮಕ್ಕೆ ಸಹಕರಿಸಿದ ಜಿಲ್ಲಾ ಮುಖ್ಯ ಆಯುಕ್ತರು ಮತ್ತು ಇತರೆ ಪದಾಧಿಕಾರಿಗಳನ್ನು ಅಭಿನಂದಿಸಿದರು. ಮಹಿಳಾ ದಿನಾಚರಣೆಯ ಮಹತ್ವ ಹಾಗೂ "ಕೊಟ್ಟು ಪಡೆಯೋಣ" ಎಂಬ ಧ್ಯೇಯವಾಕ್ಯಕ್ಕೆ ತಕ್ಕಂತೆ ಹಾವೇರಿಯಲ್ಲಿ ಆಯೋಜಿಸಿರುವ ಕಾರ್ಯಕ್ರಮಗಳಿಗೆ ಅಭಿನಂದಿಸಿದರು. ಹೆಣ್ಣು ಸಮಾಜದ ಕಣ್ಣು ಅವರಿಗೆ ಗೌರವ ಕೊಡುವುದೇ ಸಮಾಜದ ಗೌರವ, ಸಂಸ್ಕಾರ ನೀಡುವಲ್ಲಿ ಮಹಿಳೆಯ ಪಾತ್ರ & ಮಹತ್ವವನ್ನು ತಿಳಿಸಿದರು. ರೇಣುಕಾ ಸರ್ಜಿ ಆಸ್ಪತ್ರೆ,ಮಾಧುರಿ ದೇವಧರ್, ಹಾಗೂ ಇತರೆ ಎಲ್ಲರಿಗೂ ಶ್ಲಾಘಿಸಿ ಅಭಿನಂದಿಸಿದರು.

ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್) ಇವರ ಅಧ್ಯಕ್ಷೀಯ ನುಡಿಗಳಲ್ಲಿ, "ತಾಯಿ ಗರ್ಭದಿಂದಲೇ ವ್ಯಕ್ತಿಯ ವಿಕಸನ, ತಾಯಿ, ಅಕ್ಕ, ತಂಗಿ, ಮಗಳು, ಅತ್ತೆ, ಇವರುಗಳ ಪಾತ್ರ ಹೆಚ್ಚಿನದು, ಹೆಣ್ಣಿನ ಸಾಧನೆ ಬಹಳ ಮುಂದೆ ಹೋಗಿದ್ದು, ನಮ್ಮ ನಾಡಿನ ಕುಮಾರಿ ಅನನ್ಯ ಇವರು ಅಟ್ಲಾಂಟಿಕ್ ಸಮುದ್ರವನ್ನು ಏಕಾಂಗಿಯಾಗಿ ದಾಟಿ ಗಿನ್ನಿಸ್ ದಾಖಲೆ ಮಾಡಿದ್ದಾರೆ ಎಂದರು. ಮಹಿಳೆಯ ವಿವಿಧ ದಾಖಲೆಗಳನ್ನು ತಿಳಿಸಿ ಎಲ್ಲರನ್ನು ಪ್ರೋತ್ಸಾಹಿಸಿದರು.

ಶ್ರೀಮತಿ ಬಿ.ವಿ. ರಾಮಲತಾರವರು ಮಾರ್ಗದರ್ಶನ ನೀಡಿ ಭಾಗವಹಿಸಿದ್ದ ಮಹಿಳೆಯರು "ಕೊಟ್ಟು ಪಡೆಯೋಣ" ಎಂಬ ಧ್ಯೇಯ ವಾಕ್ಯಕ್ಕೆ ಏನನ್ನು ಕೊಡುತ್ತೇವೆ ಮತ್ತು ಏನನ್ನು ಪಡೆಯುತ್ತೇವೆ ಎಂಬುದರ ಬಗ್ಗೆ ಚಟುವಟಿಕೆಗಳನ್ನು ನಡೆಸಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಸ್ಥಳೀಯ ಮತ್ತು ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು, ಎಲ್.ಟಿ.ಗಳನ್ನು ಮತ್ತು ಆಯುಕ್ತರುಗಳನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀಮತಿ ಸವಿತ ಶಿವಕುಮಾರ್ ಜಿಲ್ಲಾ ಆಯುಕ್ತರು (ಗೈಡ್) ಚಿತ್ರದುರ್ಗ ಜಿಲ್ಲೆ, ಇವರು ಮಾಡಿರುವ ವಿಶೇಷ ಚಿತ್ರಕಲೆಗಳು ಹಾಗೂ ವಿವಿಧ ವಸ್ತು ಸಂಗ್ರಹಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಹಾವೇರಿ ಜಿಲ್ಲೆಯ ಸ್ಕೌಟರ್, ಗೈಡರ್, ಶಿಕ್ಷಕರು, ರೇಂಜರ್ಸ್‌ಗಳು ಮತ್ತು ರಾಜ್ಯ ಸಂಸ್ಥೆಯಎಲ್ಲಾ ಪದಾಧಿಕಾರಿಗಳು ಒಟ್ಟಾರೆ 200 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಶ್ರೀಮತಿ ಅನ್ನಪೂರ್ಣಕಟಗಿ, ಶ್ರೀ ಪರಮೇಶ್ ಚಿಕ್ಕಳ್ಳಿ ಇವರು ಕಾರ್ಯಕ್ರಮವನ್ನು ನಿರ್ವಹಿಸಿದರು. ಶ್ರೀಮತಿ ಮಾಧುರಿ ದೇವಧರ್ ಎಖಅ(ಉ), ಶ್ರೀ ಟಿ.ಇ. ಖಾಜಿ, ಜಿಲ್ಲಾ ಸ್ಕೌಟ್ಸ್ ಆಯುಕ್ತರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಿಕ್ಷಣ ಇಲಾಖೆಯ ಅಧಿಕಾರಿಗಳು, ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದು ಸಹಕರಿಸಿದರು.



# ಡಾ. ಪಿ.ಜಿ.ಆರ್ ಸಿಂಧ್ಯ ರಾಜ್ಯ ಮುಖ್ಯ ಆಯುಕ್ತರು ಇವರಿಗೆ ಗೌರವ ಡಾಕ್ಟರೇಟ್ ನೀಡಿದ ಸಂದರ್ಭದಲ್ಲಿ ಶ್ರೀಯುತರನ್ನು ಅಭಿನಂದಿಸಿದ ಸಮಾರಂಭ




ಡಾ.ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಗುಲ್ಬರ್ಗಾ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿಗೆ ಭಾಜನರಾಗಿರುವ ಪ್ರಯುಕ್ತ ಅಭಿನಂದನಾ ಸಮಾರಂಭವನ್ನು ದಿನಾಂಕ : 03.04.2026 ರಂದು ಶುಕ್ರವಾರ ಸಂಜೆ 4 ಗಂಟೆಗೆ ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಆಗಮಿಸಿರುವ ಗಣ್ಯ ಮಹನೀಯರನ್ನು, ಅತಿಥಿಗಳನ್ನು ಶ್ರೀ ಕೆ. ಗಂಗಪ್ಪಗೌಡ, ರಾಜ್ಯ ಕಾರ್ಯದರ್ಶಿಗಳು ಸ್ವಾಗತಿಸಿ ಶುಭವನ್ನುಕೋರಿದರು.

ಶ್ರೀ ಯು.ಟಿ. ಖಾದರ್, ಸನ್ಮಾನ್ಯ ಸಭಾಧ್ಯಕ್ಷರು, ಕರ್ನಾಟಕ ವಿಧಾನ ಸಭೆ ಹಾಗೂ ಹೆಚ್ಚುವರಿ ರಾಜ್ಯ ಮುಖ್ಯ ಆಯುಕ್ತರು, ಭಾ.ಸ್ಕೌ&ಗೈ ಕರ್ನಾಟಕ ಇವರು, ಮಾತನಾಡಿ "ಶ್ರೀ ಸಿಂಧ್ಯರವರು ಗೌರವ ಡಾಕ್ಟರೇಟ್ ಪದವಿಯನ್ನು ಪಡೆಯಲು ಅರ್ಹರು. ಕಾರಣ ಅವರ ಸಮಾಜ ಸೇವೆ, ವಿವಿಧ ಇಲಾಖೆಗಳ ಸಚಿವ ಸ್ಥಾನದಿಂದ ಸಾಧಿಸಿರುವ ಸಾಧನೆ ವಿಶೇಷವಾಗಿ ಸ್ಕೌಟಿಂಗ್ ಸೇವೆ, ಚಿರಸ್ಮರಣೀಯವಾದದ್ದು. ನಾನು ಸಹ ರಾಷ್ಟ್ರಪತಿ ಸ್ಕೌಟ್ಸ್ ಪದವಿಯನ್ನು ಪಡೆದಿದ್ದು ಇದರಿಂದಲೇ. ಈ ದಿನ ನಾನು ಸಭಾಧ್ಯಕ್ಷರಾಗಿ ಯಶಸ್ವಿಯಾಗಲು ಸ್ಕೌಟ್ಸ್ ಕಾರಣ" ಎಂದು ನುಡಿದರು.

ನ್ಯಾಯಮೂರ್ತಿ ಶ್ರೀ ಎನ್. ಸಂತೋಷ್ ಹೆಗ್ಡೆ, ಮಾನ್ಯ ವಿಶ್ರಾಂತ ಲೋಕಾಯುಕ್ತರು, ಕರ್ನಾಟಕ ಇವರು ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡುತ್ತಾ "ಡಾ. ಪಿ.ಜಿ.ಆರ್. ಸಿಂಧ್ಯ ಸಜ್ಜನ ರಾಜಕಾರಣಿ, ಶಿಸ್ತಿನ ಸಿಪಾಯಿ, ಸಮಯ ಪ್ರಜ್ಞೆಯಿಂದ ಮಾತನಾಡುವ ವಾಗ್ಮಿಗಳು, ಡಾ. ಪಿ.ಜಿ.ಆರ್. ಸಿಂಧ್ಯ ಇವರಿಗೆ ಸಂದಿರುವ ಗೌರವ ಡಾಕ್ಟರೇಟ್ ನನಗೆ ಸಂತೋಷವನ್ನು ತಂದಿದೆ" ಎಂದು ಶುಭಾಶಯವನ್ನು ಕೋರಿದರು.

ಶ್ರೀ ಎಸ್. ಸುರೇಶ್ ಕುಮಾರ್, ಮಾನ್ಯ ಶಾಸಕರು ಮತ್ತು ಮಾಜಿ ಶಿಕ್ಷಣ ಸಚಿವರು ಕರ್ನಾಟಕ ಸರ್ಕಾರ ಇವರು ಮಾತನಾಡುತ್ತಾ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಸಿಂಧ್ಯ ಅವರೊಂದಿಗೆ ಜೈಲಿನಲ್ಲಿ ಕಳೆದ ದಿನಗಳನ್ನು ಮತ್ತು ಆ ದಿನಗಳಲ್ಲಿ ಕಲಿತ ವಿಷಯಗಳನ್ನು ನೆನಪಿಸಿಕೊಂಡರು. 50 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ ಸಿಂಧ್ಯ ಇವರಿಗೆ ಗೌರವ ಡಾಕ್ಟರೇಟ್ ಲಭಿಸಿರುವುದು ಹರ್ಷದಾಯಕ ಎಂದು ಶುಭಾಶಯಗಳನ್ನು ಕೋರಿದರು.

ಶ್ರೀ ಸತೀಶ್ ಎಂಎಸ್., ರಾಜ್ಯ ಜಂಟಿ ಕಾರ್ಯದರ್ಶಿಗಳು ಇವರು ಡಾ. ಪಿ.ಜಿ.ಆರ್. ಸಿಂಧ್ಯ ಇವರ ಸಾಧನೆಗಳನ್ನು ಸುದೀರ್ಘವಾಗಿ ಓದಿದರು. ಶ್ರೀಮತಿ ಮುಕ್ತ ಬಿ. ಕಾಗಲಿ, ರಾಜ್ಯ ಕೇಂದ್ರ ಕಛೇರಿ ಆಯುಕ್ತರು (ಗೈಡ್ಸ್), ಇವರು ಅಭಿನಂದನಾ ಪತ್ರವನ್ನು ಓದಿದರು.





ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ಶ್ರೀ ಗೊ.ರು. ಚನ್ನಬಸಪ್ಪ, ಶ್ರೀಮತಿ ಗೀತಾ ನಟರಾಜ್, ಶ್ರೀಮತಿ ರಾಧಾ ವೆಂಕಟೇಶ್ ಇನ್ನಿತರೆ ಎಲ್ಲಾ ಗಣ್ಯ ಮಹನೀಯರು ಸೇರಿ ಡಾ. ಪಿ.ಜಿ.ಆರ್. ಸಿಂಧ್ಯ ಮತ್ತು ಶ್ರೀಮತಿ ಗೀತಾ ಸಿಂಧ್ಯ ಇವರುಗಳಿಗೆ ಅಭಿನಂದನಾ ಪತ್ರ, ಸ್ಮರಣಿಕೆ ಇವುಗಳನ್ನು ನೀಡಿ ಅಭಿನಂದಿಸಿದರು. ರಾಜ್ಯ ಸಂಸ್ಥೆಯ ಪದಾಧಿಕಾರಿಗಳು, ಸಿಬ್ಬಂದಿಗಳು, ಸಂಘಟಕರುಗಳು ಉಪಸ್ಥಿತರಿದ್ದರು.

ಗೌರವಾನ್ವಿತ ಡಾ. ಪಿ.ಜಿ.ಆರ್ ಸಿಂಧ್ಯ ಇವರು ಸನ್ಮಾನವನ್ನು ಸ್ವೀಕರಿಸಿ ಮಾತನಾಡುತ್ತಾ "ನನಗೆ ಸಂದಿರುವ ಗೌರವ ಡಾಕ್ಟರೇಟ್ ನನ್ನ ಜವಾಬ್ದಾರಿಯನ್ನು ಹೆಚ್ಚಿಸಿದೆ, ನಾನು ಇನ್ನು ಹೆಚ್ಚಿನ ಕೆಲಸ ಕಾರ್ಯಗಳನ್ನು ಹಾಗೂ ಸಮಾಜ ಮುಖಿ ಸೇವೆಗಳನ್ನು ಮಾಡುತ್ತೇನೆ. ಮಕ್ಕಳೊಂದಿಗೆ ಇರುವ ಪ್ರೀತಿ ನನ್ನನ್ನು ಹೆಚ್ಚು ಆಕರ್ಷಿಸಿದೆ. ಪ್ರತಿಯೊಬ್ಬರಿಂದ ಕಲಿತಿರುವ ಅಂಶಗಳು ನನ್ನನ್ನು ಎತ್ತರಕ್ಕೆ ಬೆಳೆಸಿವೆ" ಎಂದು ನುಡಿದರು. ಸ್ಕೌಟ್ಸ್/ಗೈಡ್ಸ್ ಸಂಸ್ಥೆಗೆ ಇತರೆ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಗೆ ತಮ್ಮ ಕೃತಜ್ಞತೆಗಳನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಭಾರತ್ ಸ್ಕೌಟ್ಸ್ & ಗೈಡ್ಸ್‌ನ ಎಲ್ಲಾ ಜಿಲ್ಲಾ ಮುಖ್ಯ ಆಯುಕ್ತರುಗಳು, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರುಗಳು, ಕಾರ್ಯದರ್ಶಿಗಳು, ಸ್ಕೌಟರ್ಸ್ & ಗೈಡರ್ಸ್ ಸಂಘಟಕರುಗಳು ಇತರ ಸಂಘ ಸಂಸ್ಥೆಯ ಪದಾಧಿಕಾರಿಗಳು ಡಾ. ಪಿ.ಜಿ.ಆರ್. ಸಿಂಧ್ಯ ಇವರ ಅಭಿಮಾನಿ ದೊಡ್ಡ ಬಳಗವು ಆಗಮಿಸಿ ಗೌರವಿಸಿದರು.

ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ ಉಪಾಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಇವರು ಅಧ್ಯಕ್ಷರ ನುಡಿಗಳಲ್ಲಿ ಡಾ. ಪಿ.ಜಿ.ಆರ್. ಸಿಂಧ್ಯರವರ ವಿಶೇಷ ಸೇವೆ ಮತ್ತು ಅವರು ಸ್ಕೌಟಿಂಗ್ ಅಭಿವೃದ್ದಿಗೆ ನೀಡಿದ ಕೊಡುಗೆಗಳನ್ನು ಸ್ಮರಿಸಿ ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಶ್ರೀ ಎಂ.ಎ. ಖಾಲಿದ್, ರಾಜ್ಯ ಆಯುಕ್ತರು (ಸ್ಕೌಟ್ಸ್), ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್ಸ್) ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಆಯುಕ್ತರು (ವಯಸ್ಕ ಸಂಪನ್ಮೂಲ), ಶ್ರೀಮತಿ ರಾಧಾ ವೆಂಕಟೇಶ್, ಸಹಾಯಕ ರಾಜ್ಯ ಆಯುಕ್ತರು (ಗೈಡ್ಸ್) ಇವರುಗಳು ಶುಭಾಶಯಗಳನ್ನು ಕೋರಿ ಅಭಿನಂದನೆಗಳನ್ನು ಸಲ್ಲಿಸಿದರು.

ಕೊನೆಯಲ್ಲಿ ಶ್ರೀಮತಿ ಮಂಜುಳ ಸಿ., ರಾಜ್ಯ ಸಂಘಟನಾ ಆಯುಕ್ತರು (ಗೈಡ್) ಇವರು ಸರ್ವರಿಗೂ ವಂದನೆಗಳನ್ನು ಸಲ್ಲಿಸಿದರು, ಶ್ರೀ ವೆಂಕಟ್‌ರಾಜ್, ಕಲಾವಿದರು ಕಾರ್ಯಕ್ರಮವನ್ನು ನಿರೂಪಿಸಿದರು.







ಡಾ. ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದ ಪ್ರಯುಕ್ತ ಬೆಂಗಳೂರಿನ ಶಾಂತಿಗೃಹದಲ್ಲಿ ಏಪ್ರಿಲ್ 3, 2026 ರಂದು ನಡೆದ ಅಭಿನಂದನಾ ಸಮಾರಂಭದ ಸಂದರ್ಭದಲ್ಲಿ ಅವರ ಧರ್ಮಪತ್ನಿ ಶ್ರೀಮತಿ ಗೀತಾಸಿಂಧ್ಯ ಅವರೊಂದಿಗೆ ರಾಜ್ಯ ಸಂಸ್ಥೆ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಗಣ್ಯರು ಹಾಗೂ ರಾಜ್ಯ ಸಂಸ್ಥೆ ಪದಾಧಿಕಾರಿಗಳು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಹಿಮಾಲಯಾ ವೃಕ್ಷಮಣಿ ಪ್ರಮಾಣ ಪತ್ರ ಪ್ರಧಾನ ಸಮಾರಂಭ






ದಿನಾಂಕ :03–04–2026 ಶುಕ್ರವಾರದಂದು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ರಾಜ್ಯ ಕೇಂದ್ರ ಕಚೇರಿಯಲ್ಲಿ, ಹಿಮಾಲಯ ವೃಕ್ಷ ಮಣಿದಾರಕರಿಗೆ ಪ್ರಮಾಣ ಪತ್ರ ಪಿನ್ ಮತ್ತು ಬೀಡ್ಸ್ ವಿತರಣ ಸಮಾರಂಭ ಏರ್ಪಡಿಸಲಾಗಿತ್ತು ಈ ಸಂದರ್ಭದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಪದಾಧಿಕಾರಿಗಳು ಹಾಗೂ ವೃಕ್ಷಮಣಿದಾರರು ಉಪಸ್ಥಿತರಿದ್ದರು, ಕಾರ್ಯಕ್ರಮದಲ್ಲಿ 140 ಸ್ಕೌಟರ್ಸ್–ಗೈಡರ್ಸ್‌ಗಳು ಭಾಗವಹಿಸಿ ಹಿಮಾಲಯ ವೃಕ್ಷಮಣಿ ಪ್ರಮಣ ಪತ್ರಗಳನ್ನು ಸ್ವೀಕರಿಸಿದರು.

# ಯುವ ಆಪದ್ ಮಿತ್ರ ಮತ್ತು ವಿಪತ್ತು ನಿರ್ವಹಣಾ ತರಬೇತಿ ಶಿಬಿರ

ದಿ.: 24.03.2026ರಿಂದ 30.03.2026ರವರೆಗೆ ಕೊಡಗು ವಿಶ್ವವಿಧ್ಯಾಲಯ, ಚಿಕ್ಕಆಳವಾರ, ಕುಶಾಲನಗರ, ಕೊಡಗು ಜಿಲ್ಲೆ ಇಲ್ಲಿ ಯುವ ಆಪದ್ ಮಿತ್ರ ಮತ್ತು ವಿಪತ್ತು ನಿರ್ವಹಣಾ ತರಬೇತಿ ಹಮ್ಮಿಕೊಳ್ಳಲಾಗಿತ್ತು.

ದಿ.: 24.03.26 ರಂದು ಬೆಳಿಗ್ಗೆ 10 ಗಂಟೆಗೆ ನೋಂದಾವಣೆ ಮಾಡಲಾಯಿತು. ತದನಂತರ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಕೆ.ಎಸ್. ಪ್ರತೀಮ್ ಕುಮಾರ್‌ರವರು ವಿಧ್ಯಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸಿದರು ಹಾಗೂ ಯುವ ಆಪದ್ ಮಿತ್ರ ವಿಪತ್ತು ನಿರ್ವಹಣಾ ತರಬೇತಿಯ ಬಗ್ಗೆ ಮಾಹಿತಿ ನೀಡಿದರು.



ದಿ.: 24.03.26 ರಂದು ಸಂಜೆ 4.00 ಗಂಟೆಗೆ ಉದ್ಘಾಟನಾ ಸಮಾರಂಭದಲ್ಲಿ "ಪ್ರವಾಹ, ಭೂಕಂಪ ಮೊದಲಾದ ನೈಸರ್ಗಿಕ ವಿಪತ್ತುಗಳು ಮತ್ತು ಮಾನವ ನಿರ್ಮಿತ ವಿಪತ್ತುಗಳು ಎದುರಾದ ಸಂದರ್ಭಗಳಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣ ಪಡೆ ತಕ್ಷಣದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತ ಬಂದಿದೆ" ಎಂದು ಕೊಡಗು ವಿಶ್ವವಿದ್ಯಾಲಯ ಕುಲಪತಿ ಪ್ರೊ|| ಅಶೋಕ ಚಂಗಪ್ಪ ಆಲೂರ ತಿಳಿಸಿದರು. ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯೂರವರು "ರಾಷ್ಟ್ರೀಯ ವಿಪತ್ತು ನಿರ್ವಹಣ ಪಡೆ ಆಗತ್ಯವಿದ್ದಾಗ ವಿಶ್ವ ಸಂಸ್ಥೆಯ ಸಮನ್ವಯದೊಂದಿಗೆ ಇತರ ದೇಶಗಳಲ್ಲಿ ಮಾನವೀಯ ನೆರವು ಮತ್ತು ರಕ್ಷಣಾ ಕಾರ್ಯಗಳಲ್ಲಿ ಭಾಗವಹಿಸುತ್ತದೆ" ಎಂದು ನುಡಿದರು. ಈ ಕಾರ್ಯಕ್ರಮದಲ್ಲಿ ಕೊಡಗು ವಿಶ್ವವಿದ್ಯಾನಿಲಯದ ಕುಲಸಚಿವರು (ಮೌಲ್ಯಮಾಪನ) ಡಾ. ಎಂ. ಸುರೇಶ್, ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಜಿಮ್ಮಿ ಸಿಕ್ವೇರಾ, ಕೊಡಗು ವಿ.ವಿ.ಯ ಮೌಲ್ಯಮಾಪನ ವಿಶೇಷ ಅಧಿಕಾರಿ ಪ್ರೊಫೆಸರ್ ಎಂ.ಎನ್ ರವಿಶಂಕರ್, ಗೈಡ್ ತರಬೇತಿ ಆಯುಕ್ತೆ ಶ್ರೀಮತಿ ಮೈಥಿಲಿ ರಾವ್, ವಿಶ್ವವಿದ್ಯಾಲಯದ ಯುವ ರೆಡ್‌ಕ್ರಾಸ್ ನೋಡಲ್ ಅಧಿಕಾರಿ ಶ್ರೀ ಜಮೀರ್ ಅಹಮ್ಮದ್, ಕೌಶಲ್ಯ ಆಕಾಡೆಮಿ ಸಂಯೋಜಕ ಶ್ರೀ ಎಂ.ಕೆ. ಸುದರ್ಶನ್, ಸಮುದಾಯ ಕಾರ್ಯಕ್ರಮಗಳ ಸಂಯೋಜಕ ಡಾ. ಲೊಕೇಶ್ ಭರಣಿ, ಶ್ರೀ ಪಿ.ಸಿ. ಮಂಜುನಾಥ್ ಗೌಡ, ಜಿಲ್ಲಾ ಸಂಘಟಕರು ಇದ್ದರು.

ದಿ.: 25.03.26ನೇ ದಿನಾಂಕದಂದು ಜಿಲ್ಲಾಡಳಿತದ ವತಿಯಿಂದ ಆಗಮಿಸಿದ ವಿಪತ್ತು ನಿರ್ವಹಣಾ ಅಧಿಕಾರಿ ಶ್ರೀ ಅನನ್ಯ ವಾಸುದೇವ್‌ರವರು ವಿಪತ್ತು ನಿರ್ವಹಣಾ ಬಗ್ಗೆ ಸವಿಸ್ತಾರವಾಗಿ ತಿಳಿಸಿಕೊಟ್ಟರು.

ದಿ.: 26.03.26 ರಂದು ಶ್ರೀ ಶೋಬಿತ್, ಅಗ್ನಿಶಾಮಕ ಅಧಿಕಾರಿ, ಮಡಿಕೇರಿ, ಕೊಡಗು ಜಿಲ್ಲೆ ಹಾಗೂ ಕುಶಾಲನಗರ ಅಗ್ನಿಶಾಮಕ ದಳದ 7 ಜನರ ತಂಡ ಬಂದು ಬೆಂಕಿಯ ಬಗ್ಗೆ ಮಹತ್ವದ ಮಾಹಿತಿಯನ್ನು ನೀಡಿದರು. ಮಾಹಿತಿ ನೀಡಿದ ನಂತರದಲ್ಲಿ ಅವರ ತಂಡ ಪ್ರಾಯೋಗಿಕವಾಗಿ ಎಲ್ಲಾ ವಿಧಾನದಲ್ಲಿ ಬೆಂಕಿಯನ್ನು ನಂದಿಸುವುದನ್ನು ತೋರಿಸಿಕೊಟ್ಟರು.

ದಿ.: 27.03.26 ರಂದು ಡಾ|| ರಾಮ್‌ಚಂದ್ರರಾವ್, ವೈದ್ಯಾಧಿಕಾರಿಗಳು, ಕೊಡಗು ಜಿಲ್ಲೆ ಹಾಗೂ ಅವರೊಂದಿಗೆ ಡಾ|| ಶೇಶಾನಂದರವರು ಆಗಮಿಸಿ ಒಬ್ಬ ವ್ಯಕ್ತಿ ಹೃದಯಾಘಾತವಾಗಿದ್ದರೆ, ಹೇಗೆ ಕಾಪಾಡುವುದು ಎಂಬುದನ್ನು ಪ್ರಾಯೋಗಿಕವಾಗಿ ವಿವರಿಸಿದರು.



ದಿನಾಂಕ: 28.03.26 ರಂದು ಮೀಸಲು ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಗಣೇಶ್, ಪೊಲೀಸ್ ಶ್ರೀ ಅಶೋಕ್ ಕೊಡಗು ಜಿಲ್ಲೆ ಇವರು ವಿಪತ್ತು ಆದ ಸಂದರ್ಭದಲ್ಲಿ ಪೊಲೀಲಿಸ್ ಅವರ ಕರ್ತವ್ಯ ಏನು ಎಂಬುದರ ಬಗ್ಗೆ ವಿವರವಾಗಿ ತಿಳಿಸಿಕೊಟ್ಟರು ಮತ್ತು ಕಟ್ಟಡದ ಒಳಬಾಗದಲ್ಲಿ ಸಿಲುಕಿಕೊಂಡ ಸಂದರ್ಭ ಹಗ್ಗದ ಸಹಾಯದಿಂದ ಹೊರಬರುವುದು ಹೇಗೆ ಎಂದು ತಿಳಿಸಿಕೊಟ್ಟರು. ವಿರಾಮದ ಸಮಯದಲ್ಲಿ ಕರ್ನಾಟಕ ರಾಜ್ಯದ ಉಚ್ಚನ್ಯಾಯಾದೀಶರಾದ ಶ್ರೀ ಇ.ಎಸ್. ಇಂದ್ರೇಶ್ ಇವರು, ಕೊಡಗು ವಿಶ್ವವಿದ್ಯಾಲಯದ 3ನೇ ವರ್ಷದ ಸಂಸ್ಥಾಪನಾ ದಿನಾಚರಣೆಗೆ ಆಗಮಿಸಿ ವಿದ್ಯಾರ್ಥಿಗಳನ್ನು ಕುರಿತು ಮಾತನಾಡಿದರು.

ದಿನಾಂಕ: 29.03.26 ರಂದು ಬೆಳಿಗ್ಗೆ ಶ್ರೀ ಜಿಮ್ಮಿ ಸಿಕ್ವೇರ ರವರು ಸ್ಕೌಟ್ & ಗೈಡ್ ಬೆಳೆದು ಬಂದ ಬಗ್ಗೆ, ಗಂಟುಗಳು, ಅಗ್ರಗಾಯಿತ್ವ, ಚಾರಣ ಮತ್ತು ದಿಕ್ಕುಗಳ ಬಗ್ಗೆ ವಿವರವಾಗಿ ತಿಳಿಸಿಕೊಟ್ಟರು. ಡಾ|| ಪ್ರವೀಣ್ ದೇವರಗುಂಡರವರು ಆರೋಗ್ಯದ ಬಗ್ಗೆ ಮತ್ತು ಶರೀರವನ್ನು ಯಾವ ರೀತಿ ಇಟ್ಟುಕೊಳ್ಳಬೇಕು ಯಾವುದರಿಂದ ಏನು ಪ್ರಯೋಜನ, ಯಾವುದರಿಂದ ಅನಾನುಕೂಲ ಎಂಬುದರ ಬಗ್ಗೆ ಸವಿಸ್ತಾರವಾಗಿ ತಿಳಿಸಿಕೊಟ್ಟರು.



ದಿನಾಂಕ: 30.03.26 ರಂದು ಬೆಳಿಗ್ಗೆ 7 ಗಂಟೆಗೆ ಶ್ರೀಮತಿ ಸುಲೋಚನಾ, ಶ್ರೀಮತಿ ರಂಜಿತ್ ದಮಯಂತಿ ನೇತೃತ್ವದಲ್ಲಿ ಸರ್ವಧರ್ಮ ಪ್ರಾರ್ಥನೆಯನ್ನು ನೆರವೇರಿಸಲಾಯಿತು. 3 ಗಂಟೆಗೆ ಸಮಾರೋಪ ಸಮಾರಂಭ ಜಿಲ್ಲಾ ಪ್ರಧಾನ ಆಯುಕ್ತರಾದ ಶ್ರೀ ಕೆ.ಟಿ. ಬೇಬಿ ಮ್ಯಾಥ್ಯೂರವರ ಅಧ್ಯಕ್ಷತೆಯಲ್ಲಿ ನಡೆಯಿತು. ತರಬೇತಿಯ ಸಂಪೂರ್ಣ ವರದಿಯನ್ನು ಶ್ರೀ ಜಿಮ್ಮಿ ಸಿಕ್ವೇರ ಅವರು ತಿಳಿಸಿದರು, ಶ್ರೀಮತಿ ಸುಲೋಚನಾ ಅವರು ಎಲ್ಲರನ್ನು ಸ್ವಾಗತಿಸಿದರು. ಇದೇ ಸಂದರ್ಭ ನಿವೃತ್ತ ಸೈನಿಕರಾದ ಶ್ರೀ ಯತೀಶ್‌ರವರನ್ನು ಸನ್ಮಾನಿಸಲಾಯಿತು. ರೋವರ್ ವಿಭಾಗದಿಂದ ಶ್ರೀ ಸಚಿನ್, ರೇಂಜರ್ ವಿಭಾಗದಿಂದ ರಕ್ಷಿತರವರು ಶಿಬಿರದ ಬಗ್ಗೆ ಅನಿಸಿಕೆಯನ್ನು ತಿಳಿಸಿದರು. ಈ ತರಬೇತಿಯಲ್ಲಿ 56 ರೇಂಜರ್ಸ್, 63 ರೋವರ್ಸ್, 3 ಆರ್‌ಎಸ್‌ಎಲ್ ಭಾಗವಹಿಸಿದ್ದರು. ರೋವರ್ಸ್‌ಗಳ ಜವಬ್ದಾರಿಯನ್ನು ಜಿಲ್ಲಾ ಸ್ಕೌಟ್ ವಿಭಾಗದ ತರಬೇತಿದಾರರಾದ ಶ್ರೀ ರಂಜಿತ್, ರೇಂಜರ್ಸ್ ವಿಭಾಗದ ಜವಾಬ್ದಾರಿಯನ್ನು ಜಿಲ್ಲಾ ಸಂಘಟಕರಾದ ಶ್ರೀಮತಿ ದಮಯಂತಿಯವರು ಮತ್ತು ಜಿಲ್ಲಾ ಸಹಾಯಕ ಗೈಡ್ ಆಯುಕ್ತರಾದ ಶ್ರೀಮತಿ ಸುಲೋಚನರವರು ನಿರ್ವಹಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಶ್ರೀಮತಿ ದಮಯಂತಿಯವರು ಎಲ್ಲರನ್ನು ವಂದಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಜಿಲ್ಲಾ ಸ್ಕೌಟ್ ವಿಭಾಗದ ತರಬೇತಿ ಆಯುಕ್ತರಾದ ಶ್ರೀ ರಂಜಿತ್ ಅವರು ನೆರೆವೇರಿಸಿದರು.





## ರಾಷ್ಟ್ರೀಯ ಯುವ ಆಪದ್ ಮಿತ್ರ ಮತ್ತು ವಿಪತ್ತು ನಿರ್ವಹಣಾ ತರಬೇತಿ ಶಿಬಿರ

ದಕ್ಷಿಣ ಕನ್ನಡ ಜಿಲ್ಲಾಡಳಿತ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಹಾಗೂ ಮೈ ಭಾರತ್ ಇವರ ಸಹಯೋಗದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ದ.ಕ ಜಿಲ್ಲಾ ತರಬೇತಿ ಕೇಂದ್ರ ಶಿವನಗರ ಪಿಲಿಕುಳ ಇಲ್ಲಿ ದಿನಾಂಕ 23.02.2026 ರಿಂದ 01.03.2026 ರವರೆಗೆ 2ನೇ ಬಾರಿ ದಕ್ಷಿಣ ಕನ್ನಡ, ಕೊಡಗು ಹಾಗೂ ಉತ್ತರ ಕನ್ನಡದ ಯುವಕ/ಯುವತಿಯರಿಗೆ ರಾಷ್ಟ್ರೀಯ ಯುವ ಆಪದ್ ಮಿತ್ರ ಎಂಬ 7 ದಿನದ ತರಬೇತಿ ಶಿಬಿರವನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪ್ರಾದೇಶಿಕ ನಿರ್ದೇಶಕರಾಗಿರುವ ಅಖಿಲ ಕರ್ನಾಟಕ ಜನ ಜಾಗೃತಿ ವೇದಿಕೆಯ ರಾಜ್ಯ ಕಾರ್ಯದರ್ಶಿ ಶ್ರೀ ವಿವೇಕ್ ವಿನ್ಸೆಂಟ್ ಜಾಯ್ಸ್ ದೀಪ ಬೆಳಗಿಸಿ ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ. ತುಂಬೆ ವಹಿಸಿದ್ದರು. ವೇದಿಕೆಯಲ್ಲಿ ನವ ಭಾರತ್ ಯುವ ವ್ಯಾವಹಾರಿಕ ಅಧಿಕಾರಿ ಶ್ರೀ ಜಗದೀಶ್ ಕೆ., ಜಿಲ್ಲಾ ಯುವ ಅಧಿಕಾರಿ ಶ್ರೀ ಉಲ್ಲಾಸ್ ಉಪ ಸ್ಥಿತರಿದ್ದರು. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್. ಎಲ್ಲರನ್ನೂ ಸ್ವಾಗತಿಸಿದರು ಮತ್ತು ಪ್ರಾಸ್ತಾವಿಕ ನುಡಿ ಮಾಡಿದರು. ಗೈಡರ್ ಶ್ರೀಮತಿ ಸುಫಲಾರವರು ಧನ್ಯವಾದ ನೀಡಿದರು. ಗೈಡರ್ ಶ್ರೀಮತಿ ಸ್ವರ್ಣಲತಾರವರು ಕಾರ್ಯಕ್ರಮ ನಿರ್ವಹಿಸಿದರು.

ದಿನಾಂಕ 1.3.2026 ರಂದು ನಡೆದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ದ.ಕ. ಜಿಲ್ಲಾ ಸಂಸ್ಥೆಯ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ. ತುಂಬೆ ವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಂಗಳೂರು ವಿಶ್ವ ವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮ ಅಧಿಕಾರಿಯಾದ ಡಾ. ಸೇಸಪ್ಪ ಅಮೀನ್ ಭಾಗವಹಿಸಿದ್ದರು. ಅತಿಥಿಗಳಾಗಿ ಶ್ರೀ ಶ್ರೀಕಾಂತ್, ದ.ಕ. ಜಿಲ್ಲಾ ಯುವಕ ಮಂಡಲದ ತರಬೇತಿದಾರರು ಹಾಗೂ ರಾಷ್ಟ್ರೀಯ ಯೋಜನ ಉಪನ್ಯಾಸಕರಾದ ಶ್ರೀ ನವೀನ್, ಪುರುಷರ ತಂಡದ ನಾಯಕರಾದ ಶ್ರೀ ರೋಹನ್, ಉಪಸ್ಥಿತರಿದ್ದರು. 7 ದಿನದ ಶಿಬಿರದ ವರದಿಯನ್ನು ಮಹಿಳೆಯರ ತಂಡದ ನಾಯಕಿಯಾದ ಶ್ರೀಮತಿ ಮೊನಿಷಾರವರು ಪ್ರಸ್ತುತ ಪಡಿಸಿದರು. ಶಿಬಿರಾರ್ಥಿಗಳಾದ ಉತ್ತರ ಕನ್ನಡದ ಶ್ರೀ ಜೂಹಿತ್, ಕೊಡಗು ಜಿಲ್ಲೆಯ ಶ್ರೀಮತಿ ಐಶ್ವರ್ಯ, ದಕ್ಷಿಣ ಕನ್ನಡದ ಶ್ರೀಮತಿ ಪ್ರೇಕ್ಷಾತಮ್ಮ ಅನಿಸಿಕೆಯನ್ನು ವ್ಯಕ್ತ ಪಡಿಸಿದರು. ದ.ಕ. ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿಯಾದ ಹಾಗೂ ಸ್ವಸ್ತಿಕ ಕಾಲೇಜಿನ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್. ಅತಿಥಿಗಳನ್ನು ಸ್ವಾಗತಿಸಿದರು, ಶ್ರೀಮತಿ ಅಪೇಕ್ಷಾ ಭಂಡಾರಿ, ರೇಂಜರ್ ಲೀಡರ್, ಉಪನ್ಯಾಸಕಿ ಗೋವಿಂದದಾಸ್ ಕಾಲೇಜು ಇವರು ಧನ್ಯವಾದ ನೀಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಶಿಬಿರಾರ್ಥಿ ತಪಸ್ವಿನಿ ನಿರ್ವಹಿಸಿದರು.





# ರಾಜ್ಯ ಮಟ್ಟದ ಸಮುದ್ರತೀರ ಚಾರಣ






ದಿನಾಂಕ 26.03.2026 ರಂದು ಅಪರಾಹ್ನ 5.00 ಗಂಟೆಗೆ ದಕ್ಷಿಣ ಕನ್ನಡ ಜಿಲ್ಲಾ ಸ್ಕೌಟ್–ಗೈಡ್ ಭವನ ಮಂಗಳೂರು ಇಲ್ಲಿ ಡಾ। ಎಂ. ಮೋಹನ್ ಆಳ್ವ, ಜಿಲ್ಲಾ ಮುಖ್ಯ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ದೀಪ ಪ್ರಜ್ವಲನ ಮಾಡುವ ಮೂಲಕ ಮಂಗಳೂರಿನಿಂದ ಮುಲ್ಕಿವರೆಗಿನ "ರಾಜ್ಯ ಮಟ್ಟದ ಸಮುದ್ರ ತೀರಚಾರಣದ" ಉದ್ಘಾಟನಾ ಸಮಾರಂಭವು ನಡೆಯಿತು. ಶಿಬಿರದ ನಾಯಕರಾದ ಡಾ. ರಾಹುಲ್, ಟಿ.ಜಿ. ಆಯುಕ್ತರು, ಸೀ ಸ್ಕೌಟ್, ದ.ಕ. ಜಿಲ್ಲೆ ಇವರು ಬೆಸ್ತರ ಜೀವನ ಶೈಲಿ, ಬೀಚ್ ಶುಚಿತ್ವದ ಉದ್ದೇಶವನ್ನು ಇಟ್ಟುಕೊಂಡು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರಾಸ್ತಾವಿಕವಾಗಿ ತಿಳಿಸಿದರು. ಚಾರಣ ನಿರ್ದೇಶಕರಾದ ಶ್ರೀ ರೋಹಿತ್ ರಾವ್ 3 ದಿನಗಳ ಚಾರಣದ ಬಗ್ಗೆ ತಿಳಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್‌ಕುಮಾರ್ ಕೆ.ಎಸ್. ಅತಿಥಿಗಳನ್ನು ಸ್ವಾಗತಿಸಿದರು. ವೇದಿಕೆಯಲ್ಲಿ ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ ತುಂಬೆ, ಜಿಲ್ಲಾ ಗೈಡ್ ಆಯುಕ್ತೆ ಶ್ರೀಮತಿ ವಿಮಲಾ ರಂಗಯ್ಯ, ದ.ಕ. ಜಿಲ್ಲಾ ವಯಸ್ಕ ಸಂಪನ್ಮೂಲ ಆಯುಕ್ತರಾದ ಶ್ರೀಮತಿ ಫೆಲ್ಸಿ ಫೆರ್ನಾಂಡಿಸ್ ಮುಂತಾದವರು. ಉಪಸ್ಥಿತರಿದ್ದರು. ಜಿಲ್ಲಾ ಜಂಟಿ ಕಾರ್ಯದರ್ಶಿಯಾದ ಶ್ರೀಮತಿ ಜಯವಂತಿ ಸೋನ್ಸ್ ಧನ್ಯವಾದ ನೀಡಿದರು. ರೋವರ್ ಸ್ಕೌಟ್ ಲೀಡರ್ ಶ್ರೀ ಚಂದ್ರಾಕ್ಷ ಕಾರ್ಯಕ್ರಮ ನಿರ್ವಹಿಸಿದರು.

ದಿನಾಂಕ 29.03.2026 ರಂದು ಪೂರ್ವಾಹ್ನ 10.30ಕ್ಕೆ ಧರ್ಮದರ್ಶಿ ಡಾ। ಹರಿಕೃಷ್ಣ ಪುನರೂರುರವರ ಅಧ್ಯಕ್ಷತೆಯಲ್ಲಿ ರಾಜ್ಯ ಮುಖ್ಯ ಅಯುಕ್ತರಾದ ಡಾ॥ ಪಿ.ಜಿ.ಆರ್. ಸಿಂಧ್ಯಾರವರ ಸಮಾರೋಪ ಭಾಷಣದ ಮೂಲಕ ರಾಜ್ಯ ಮಟ್ಟದ ಸಮುದ್ರ ತೀರಚಾರಣ ಶಿಬಿರವು ಮುಕ್ತಾಯಗೊಂಡಿತು. ಮುಲ್ಕಿ ಸೀಮೆ ಅರಸರು ಶ್ರೀ ದುಗ್ಗಣ್ಣ ಸಾವಂತರು ಹಾಗೂ ಡಾ.ಕೆ ನರಸಿಂಹ ಪೈ, ಅಧ್ಯಕ್ಷರು ಶ್ರೀ ವ್ಯಾಸ ಮಹರ್ಷಿ ವಿದ್ಯಾಪೀಠ, ಮುಲ್ಕಿ ಇವರು ಸಾಂದರ್ಭಿಕವಾಗಿ ಮಾತನಾಡಿದರು. ಮುಲ್ಕಿ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು ಶ್ರೀ ಸರ್ವೋತ್ತಮ ಅಂಚನ್ ಸ್ವಾಗತಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್‌ಕುಮಾರ್ ಕೆ.ಎಸ್. ಧನ್ಯವಾದ ನೀಡಿದರು. ಚಾರಣದ ನಾಯಕರಾದ ಡಾ। ರಾಹುಲ್‌ರವರು 4 ದಿನಗಳ ವರದಿಯನ್ನು ನೀಡಿದರು. ಚಾರಣ ನಿರ್ದೇಶಕರಾದ ಶ್ರೀ ರೋಹಿತ್ ರಾವ್‌ರವರು ಚಾರಣ ನಡೆದು ಬಂದದಾರಿ ಬಗ್ಗೆ ತಿಳಿಸಿದರು. ಡಾ. ಅಪರ್ಣ ಆಳ್ವ ಪ್ರಶಸ್ತಿ ಪತ್ರ ಓದಿದರು. ವೇದಿಕೆಯಲ್ಲಿ ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್, ಸ್ಥಳೀಯ ಸಂಸ್ಥೆಯ ಅಧ್ಯಕ್ಷರುಗಳು ಉಪಸ್ಥಿತರಿದ್ದರು. ರೋವರ್ ಸ್ಕೌಟ್ ಲೀಡರ್ ಶ್ರೀ ಲಕ್ಷ್ಮೀಶ ಕಾರ್ಯಕ್ರಮ ನಿರೂಪಿಸಿದರು.

# ಸಂಘಟಕರುಗಳ ಸಭೆ

ದಿನಾಂಕ 2.4.2026 ರಿಂದ 4.4.2026ರ ವರಿಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಕೇಂದ್ರ ಕಛೇರಿ ಬೆಂಗಳೂರು ಇಲ್ಲಿ ರಾಜ್ಯ ಸಂಸ್ಥೆಯ ವತಿಯಿಂದ ಆಯೋಜಿಸಿರುವ ರಾಜ್ಯ ಮಟ್ಟದ ಸಂಘಟಕರುಗಳ ಸಭೆಯ ಉದ್ಘಾಟನೆ ಕಾರ್ಯಕ್ರಮವನ್ನು ದಿನಾಂಕ 2.4.2026 ರಂದು ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಡಾ. ಜಿ.ಪಿ.ಆರ್. ಸಿಂಧ್ಯರವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯನ್ನು ಮಾನ್ಯ ಸಭಾಧ್ಯಕ್ಷರು ವಿಧಾನಸಭೆ ಮತ್ತು ಹೆಚ್ಚುವರಿ ರಾಜ್ಯ ಆಯುಕ್ತರಾದ ಶ್ರೀ ಯು.ಟಿ. ಖಾದರ್‌ರವರು ಉದ್ಘಾಟಿಸಿ ಶುಭಹಾರೈಸಿದರು. ಈ ಸಂದರ್ಭದಲ್ಲಿ ರಾಜ್ಯ ಆಯುಕ್ತರಾದ ಶ್ರೀ ಎಂ.ಎ. ಖಾಲೀದ್, ಶ್ರೀಮತಿ ಗೀತಾ ನಟರಾಜ್, ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪ ಗೌಡ, ರಾಜ್ಯ ಸಹಾಯಕ ಕಾರ್ಯದರ್ಶಿ ಶ್ರೀ ಎಲ್.ಟಿ. ಲೋಕೇಶ್, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ ಭಟ್, ಶ್ರೀಮತಿ ಮಂಜುಳಾ ಸಿ., ರಾಜ್ಯ ತರಬೇತಿ ಆಯುಕ್ತರಾದ ಶ್ರೀ ನಾಗೇಶ್ ಆರ್. ಶಿವಪೂರ್, ಶ್ರೀಮತಿ ಶ್ಯಾಮಲ ಕೆ.ವಿ. ಹಾಗೂ ರಾಜ್ಯದ ಎಲ್ಲಾ ಸಂಘಟಕರು ಮತ್ತು ಕೇಂದ್ರ ಕಛೇರಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.





# ರಾಷ್ಟ್ರೀಯ ಯುವ ಆಪದ್‌ಮಿತ್ರ ಹಾಗೂ ವಿಪತ್ತು ನಿರ್ವಹಣಾ ಶಿಬಿರ




ರಾಷ್ಟ್ರೀಯ ಯುವ ಆಪದ್ ಮಿತ್ರ ವಿಪತ್ತು ನಿರ್ವಹಣಾ ಶಿಬಿರವು ಡಾ. ವಿ.ಎಸ್. ಆಚಾರ್ಯ ಜಿಲ್ಲಾ ತರಬೇತಿ ಕೇಂದ್ರ ಪ್ರಗತಿ ನಗರ ಮಣಿಪಾಲದಲ್ಲಿ ದಿನಾಂಕ 10.3.2026 ರಂದು ಪ್ರಾರಂಭವಾಯಿತು. ಮೊದಲನೆಯ ದಿನ ನೊಂದಾವಣಿ ಗುಂಪು ವಿಭಜನೆ, ಶಿಬಿರದ ಬಗ್ಗೆ ಮಾಹಿತಿ ಶಿಬಿರದ ಬಗ್ಗೆ ಮಾಹಿತಿ ಹಾಗೂ ಸ್ಕೌಟಿಂಗಿನ ಇತಿಹಾಸವನ್ನು ತಿಳಿಸಲಾಯಿತು. ರಾತ್ರಿ ಹಾಡು ಕಾರ್ಯಕ್ರಮ ನಡೆಸಿ ಶಿಬಿರವನ್ನು ಮುಕ್ತಾಯಗೊಳಿಸಲಾಯಿತು.

ದಿನಾಂಕ 11.3.2026 ರಂದು ಬಿ.ಪಿ. ಸಿಕ್ಸ್ ವ್ಯಾಯಾಮದ ನಂತರ ವಿಪತ್ತು ನಿರ್ವಹಣೆಯ ಬಗ್ಗೆ ಮಾಹಿತಿಯನ್ನು ನೀಡಲಾಯಿತು. ಸ್ಕೌಟಿಂಗಿನ ಗಂಟುಗಳು ಅಗ್ರಗಾಮಿ ಪ್ರಾರ್ಥನೆ, ಧ್ವಜ ಗೀತೆ ಇವುಗಳ ಬಗ್ಗೆ ಮಾಹಿತಿ ಮತ್ತು ತರಬೇತಿಯನ್ನು ಕೊಡಲಾಯಿತು. ರಾತ್ರಿ ಶಿಬಿರಾಗ್ನಿ ಕಾರ್ಯಕ್ರಮವನ್ನು ಮಾಡಿ ಕಾರ್ಯಕ್ರಮ ಮುಕ್ತಾಯಗೊಳಿಸಲಾಯಿತು.

ದಿನಾಂಕ 12.3.2026 ರಂದು ಪಥಸಂಚಲನ ನಂತರ ರಸ್ತೆ ಸುರಕ್ಷತೆಯ ಬಗ್ಗೆ ಮಾಹಿತಿ ಮತ್ತು ತರಬೇತಿಯನ್ನು ಕೊಡಲಾಯಿತು. ಪಿಚ್ ಮಾಡುವುದರ ಮೂಲಕ ಮೂರು ಟೆಂಟುಗಳನ್ನು ಹಾಕಿಸಲಾಯಿತು. ವಿಪತ್ತು ನಿರ್ವಹಣೆ ಅಧಿಕಾರಿಯಾಗಿರುವ ಶ್ರೀ ವಿಜಯ್‌ರವರು ಮಾಹಿತಿ ಮತ್ತು ತರಬೇತಿಯನ್ನು ನೀಡಿದರು. ಸಂಜೆ 5.30 ಗಂಟೆಗೆ ಉದ್ಘಾಟನಾ ಕಾರ್ಯಕ್ರಮವನ್ನು ಮಾನ್ಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ ಅವರು ನಡೆಸಿಕೊಟ್ಟರು ಜಿಲ್ಲಾ ಖಜಾಂಚಿಯಾಗಿರುವ ಶ್ರೀ ಹರಿಪ್ರಸಾದ್ ರೈ, ಶ್ರೀ ಕೆ.ಜೆ. ಗೋಪಾಲಕೃಷ್ಣ, ಜಿಲ್ಲಾ ಕಾರ್ಯದರ್ಶಿ ಹಾಗೂ ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು. ಸಂಜೆ ಭವ್ಯ ಶಿಬಿರಾಗ್ನಿಯನ್ನು ಏರ್ಪಡಿಸಿ ಶಿಬಿರವನ್ನು ಮುಕ್ತಾಯಗೊಳಿಸಲಾಯಿತು.

ದಿನಾಂಕ 13.3.2026 ರಂದು ಬಿಪಿ ಸಿಕ್ಸ್ ವ್ಯಾಯಾಮದ ನಂತರ ಎನ್.ಡಿ.ಆರ್.ಎಫ್. ಅಧಿಕಾರಿಗಳು ಆಗಮಿಸಿ ಮಾಹಿತಿ ಮತ್ತು ತರಬೇತಿಯನ್ನು ನೀಡಿದರು. ವಿಪತ್ತು ನಿರ್ವಹಣಾ ಅಧಿಕಾರಿ ಶ್ರೀ ರೋಹನ್ ಇವರು ಆಗಮಿಸಿ ವಿಪತ್ತು ನಿರ್ವಹಣೆ ಬಗ್ಗೆ ಮಾಹಿತಿಯನ್ನು ನೀಡಿದರು. ರಾತ್ರಿ ಭವ್ಯ ಶಿಬಿರಾಗ್ನಿಯನ್ನು ಏರ್ಪಡಿಸಿ ಶಿಬಿರವನ್ನು ಮುಕ್ತಾಯಗೊಳಿಸಲಾಯಿತು.

ದಿನಾಂಕ 14.3.2026 ರಂದು ಏರೋಬಿಕ್ ವ್ಯಾಯಾಮದ ನಂತರ ಕಸ್ತೂರಿ ಮೆಡಿಕಲ್ ಕಾಲೇಜ್ ಮಣಿಪಾಲ ಇಲ್ಲಿಯ ವೈದ್ಯಾಧಿಕಾರಿಗಳಿಂದ ಮಾಹಿತಿ ಮತ್ತು ತರಬೇತಿಯನ್ನು ನೀಡಲಾಯಿತು. ಮಧ್ಯಾಹ್ನ ನಂತರ ವಿಪತ್ತು ನಿರ್ವಹಣೆ ಬಗ್ಗೆ ಮಾಹಿತಿಯನ್ನು ನೀಡಲಾಯಿತು. ಹಾಗೂ ಸ್ಕೌಟಿಂಗ್ ಬಗ್ಗೆ ಮಾಹಿತಿ ಕೊಡಲಾಯಿತು. ಶಿಬಿರಾಗ್ನಿಯ ನಂತರ ಶಿಬಿರವನ್ನು ಮುಕ್ತಾಯಗೊಳಿಸಲಾಯಿತು.

ದಿನಾಂಕ 15.3.2026 ರಂದು ಬೆಳಿಗ್ಗೆ ಸರ್ವಧರ್ಮ ಪ್ರಾರ್ಥನೆ ನಂತರ ಅಗ್ನಿಶಾಮಕ ದಳದ ಅಧಿಕಾರಿಗಳು ಆಗಮಿಸಿ ಮಾಹಿತಿ ಮತ್ತು ತರಬೇತಿಯನ್ನು ನೀಡಿದರು. ಸಮಾರೋಪ ಸಮಾರಂಭವನ್ನು ಮಾನ್ಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿಯವರು ನಡೆಸಿಕೊಟ್ಟರು. ಮಧ್ಯಾಹ್ನ ವಿಪತ್ತು ನಿರ್ವಹಣೆ ಮತ್ತು ಹಾಗೂ ಕರಾವಳಿ ಕಾವಲು ಪಡೆಯವರಿಂದ ಮಾಹಿತಿ ಮತ್ತು ತರಬೇತಿಯನ್ನು ನೀಡಲಾಯಿತು. ರಾತ್ರಿ ಶಿಬಿರಾಗ್ನಿಯ ನಂತರ ಶಿಬಿರವನ್ನು ಮುಕ್ತಾಯಗೊಳಿಸಲಾಯಿತು.

ದಿನಾಂಕ 16.3.2026 ರಂದು ಏರೋಬಿಕ್ ವ್ಯಾಯಾಮ, ಸ್ವಚ್ಛತಾ ಕಾರ್ಯಕ್ರಮ ಹಾಗೂ ಮುಕ್ತ ಚರ್ಚೆ ಮೂಲಕ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.




# ರಾಜ್ಯ ಕಾರ್ಯಕಾರಿ ಸಮಿತಿ ಸಭೆ




ದಿನಾಂಕ 3.4.2026 ದಂದು ಭಾರತ್ ಸ್ಕೌಟ್ಸ್–ಗೈಡ್ಸ್ ಕರ್ನಾಟಕ ಕೇಂದ್ರ ಕಛೇರಿ ಬೆಂಗಳೂರು ಇಲ್ಲಿ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯನ್ನು ಮಾನ್ಯ ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಪಿ.ಜಿ.ಆರ್. ಸಿಂಧ್ಯರವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಸದರಿ ಸಭೆಯಲ್ಲಿ ರಾಜ್ಯ ಸಂಸ್ಥೆ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ರಾಜ್ಯ ಆಯುಕ್ತರಾದ ಶ್ರೀ ಚಿನ್ನಸ್ವಾಮಿ ರೆಡ್ಡಿ, ಶ್ರೀ ಎಂ.ಎ. ಖಾಲೀದ್, ಶ್ರೀಮತಿ ಗೀತಾ ನಟರಾಜ್, ಶ್ರೀಮತಿ ಬಿ.ವಿ. ರಾಮಲತಾ, ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪಗೌಡ ಹಾಗೂ ಇತರೆ ಪದಾಧಿಕಾರಿಗಳಾದ ಶ್ರೀ ಕೆ.ವಿ. ಶಂಕರಪ್ಪ, ಶ್ರೀ ಪಿ. ವಿಶ್ವನಾಥ್, ಶ್ರೀ ಸಿದ್ಧರಾಮಸ್ವಾಮಿ ಸೇರಿದಂತೆ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರುಗಳು ಮತ್ತು ರಾಜ್ಯ ಕೇಂದ್ರ ಕಛೇರಿ ಅಧಿಕಾರಿಗಳು ಭಾಗವಹಿಸಿದ್ದರು. ಈ ಸಭೆಯಲ್ಲಿ ಅಜೆಂಡಾದಂತೆ ಮತ್ತು 2026–27ನೇ ಸಾಲಿನ ಕಾರ್ಯಕ್ರಮ, ಚಟುವಟಿಕೆಗಳು, ಶಿಬಿರಗಳು ಮತ್ತು ಅಭಿವೃದ್ಧಿಯ ಬಗ್ಗೆ ಚರ್ಚಿಸಲಾಯಿತು.

# ರಾಜ್ಯ ಮಟ್ಟದ ಪೈಪ್ ಬ್ಯಾಂಡ್ ತರಬೇತಿ ಶಿಬಿರ





ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ, ದಾವಣಗೆರೆ ಇವರ ನೇತೃತ್ವದಲ್ಲಿ ದಿನಾಂಕ 20.04.2026 ರಿಂದ 26.04.2026ರ ವರೆಗೆ ಶ್ರೀಮತಿ ಪಾರ್ವತಮ್ಮ ಮತ್ತು ಶಾಮನೂರು ಶಿವಶಂಕರಪ್ಪ ವಸತಿ ಶಾಲೆ, ತೋಳುಹುಣಸೆ, ದಾವಣಗೆರೆ ಜಿಲ್ಲೆಯಲ್ಲಿ ನಡೆದ **ರಾಜ್ಯ ಮಟ್ಟದ ಪೈಪ್ ಬ್ಯಾಂಡ್ ತರಬೇತಿ ಶಿಬಿರ**ದ ಉದ್ಘಾಟನೆ ಸಮಾರಂಭವನ್ನು ದಿನಾಂಕ 20.04.2026ರಂದು ದಾವಣಗೆರೆಯ ಉದ್ಯಮಿಗಳು ಹಾಗೂ ಯುವ ಮುಖಂಡರಾದ ಶ್ರೀ ಸಮರ್ಥ್ ಶಾಮನೂರು ನೆರವೇರಿಸಿದರು. ದಾವಣಗೆರೆ ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಮತ್ತು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ದಿನೇಶ್ ಕೆ. ಶೆಟ್ಟಿಯವರು ಅಧ್ಯಕ್ಷತೆ ವಹಿಸಿದ್ದರು. ಶಾಲೆಯ ಸ್ಕೌಟ್ ಮಾಸ್ಟರ್ ಶ್ರೀ ಡಿ.ಆರ್. ಷಡಕ್ಷರಿ ದೇವ ಇವರು ಎಲ್ಲರನ್ನೂ ಸ್ವಾಗತಿಸಿ ಶಿಬಿರದ ಬಗ್ಗೆ ಮಾಹಿತಿಯನ್ನು ನೀಡಿದರು. ವೇದಿಕೆಯಲ್ಲಿ ಜಾರ್ಖಂಡಿನ ರಾಂಚಿಯಿಂದ ಆಗಮಿಸಿದಂತಹ ಬ್ಯಾಂಡ್ ಮಾಸ್ಟರ್ ಆದ ಶ್ರೀಮತಿ ಸಪ್ನ ಕುಮಾರಿ ಅವರು ಪೈಪ್ ಬ್ಯಾಂಡ್ ಡೆಮೋ ನೀಡುವುದರ ಮೂಲಕ ವಿದ್ಯಾರ್ಥಿಗಳಿಗೆ ಹಾಗೂ ಅತಿಥಿಗಳಿಗೆ ಪೈಪ್ ಬ್ಯಾಂಡ್ ಪರಿಚಯಿಸಿದರು. ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಟಿ.ಎಂ. ರವೀಂದ್ರಸ್ವಾಮಿ ಇವರು ಶಿಬಿರಾರ್ಥಿಗಳಿಗೆ ಶುಭ ಕೋರಿದರು. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಸ್ಕೌಟ್–ಗೈಡ್ ರೋವರ್–ರೇಂಜರ್ ವಿದ್ಯಾರ್ಥಿಗಳು ಶಿವಿರಾರ್ಥಿಗಳಾಗಿ ಉಪಸ್ಥಿತರಿದ್ದರು.

ಏಪ್ರಿಲ್ 25 ರಂದು ರಾಜ್ಯ ಮುಖ್ಯ ಆಯುಕ್ತರಾದ ಡಾ. ಪಿ.ಜಿ.ಆರ್. ಸಿಂಧ್ಯರವರು ಶಿಬಿರಕ್ಕೆ ಭೇಟಿ ನೀಡಿ ಶುಭಕೋರಿ ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ, ಶ್ರೀ ಮಂಜುನಾಥ ರಂಗರಾಜು, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ ಭಟ್, ಶ್ರೀ ಎ.ಪಿ. ಷಡಕ್ಷರಪ್ಪ ಜಿಲ್ಲಾ ಆಯುಕ್ತರು (ಸ್ಕೌ), ಶ್ರೀಮತಿ ಎಂ. ರತ್ನ, ಜಿಲ್ಲಾ ಕಾರ್ಯದರ್ಶಿ ಇತರರು ಉಪಸ್ಥಿತರಿದ್ದ ರು.



# ಜಿಲ್ಲಾ ವಾರ್ತೆಗಳು

## ಬಾಗಲಕೋಟೆ




ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆಸಿರುವ ಬೇಸಿಗೆ ಶಿಬಿರದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಪ್ರಾಚಾರ್ಯರಾದ ಡಾ. ಅರುಣಕುಮಾರ ಗಾಳಿ ಇವರು ಮಾತನಾಡಿ. “ವಿದ್ಯಾರ್ಥಿಗಳು ಇಂಥ ಶಿಬಿರಗಳಲ್ಲಿ ಪಾಲ್ಗೊಳ್ಳುವದರಿಂದ ನಿಮ್ಮೊಳಗೆ ಆತ್ಮವಿಶ್ವಾಸ ಬೆಳೆಯುವದಲ್ಲದೇ ಉತ್ತಮ ಜೀವನ ಕೌಶಲ್ಯ ಬೆಳೆಸುತ್ತದೆ. ಹಾಗಾಗಿ ವಿದ್ಯಾರ್ಥಿಗಳುಇಂಥ ಶಿಬಿರಗಳಲ್ಲಿ ಪಾಲ್ಗೊಳ್ಳಬೇಕು” ಎಂದರು. ಮುಖ್ಯ ಅತಿಥಿಗಳಾಗಿ ಶ್ರೀ ಪಶುಪತಿ ಜಿಗಜಿನ್ನಿ ಅವರು ಟೆಲಿಮಾನಸ ಸೇವೆ, ಮಾನಸಿಕ ಸ್ವಾಸ್ಥ್ಯ, ಮನೋಸಾಮಾಜಿಕ ಸಹಾಯದ ಹೆಲ್ಪ್ ಲೈನ್ ಸೇವೆಗಳ ಕುರಿತು ಮಾಹಿತಿಯನ್ನು ನೀಡಿದರು. “ಯುವಜನಾಂಗದವರಲ್ಲಿ ಹೆಚ್ಚು ಕಾಡುತ್ತಿರುವ ರಿಲೇಷನ್‌ಶಿಪ್ ಬ್ರೇಕ್ ಡೌನ್‌ನಂತಹ ಕಾರಣಗಳಿಂದ ಮಾನಸಿಕ ಆರೋಗ್ಯ ಹದಗೆಡುತ್ತದೆ. ಹಾಗಾಗಿ ಇಂಥ ಶಿಬಿರಗಳಲ್ಲಿ ಪಾಲ್ಗೊಳ್ಳುವದರಿಂದ ಮಾನಸಿಕ ಸ್ವಾಸ್ಥ್ಯ ಸುಧಾರಣೆಯಾಗುವದು” ಎಂದರು. ಇನ್ನೋರ್ವ ಮುಖ್ಯ ಅತಿಥಿಗಳಾಗಿಮಾತನಾಡಿದ ಡಾ. ಚಂದ್ರಶೇಖರ ಕಾಳೆ ಅವರು “ಸಣ್ಣ ಪುಟ್ಟ ಸಹಾಯಗಳನ್ನುಕುಟುಂಬದಿಂದಲೇ ಪ್ರಾರಂಭಿಸಿ ಸೇವಾ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಶಿಸ್ತು, ನಾಯಕತ್ವದ ಮೂಲಕ, ಸಮವಸ್ತ್ರಕ್ಕೆ ಒಂದು ಬೆಲೆಯಿದೆ. ನಮ್ಮನ್ನು ನಾವು ಸದೃಢಗೊಳಿಸಿಕೊಳ್ಳಲು ಸ್ಕೌಟ್ ಮತ್ತು ಗೈಡ್ಸ ಸಹಾಯಕ. ಇಂಥ ಶಿಬಿರಗಳಲ್ಲಿ ತೊಡಗಿಸಿಕೊಳ್ಳುವದರಿಂದ ಉತ್ತಮ ವ್ಯಕ್ತಿತ್ವ ಬೆಳೆಸಿಕೊಳ್ಳಲು ಸಾಧ್ಯ” ಎಂದರು. ಇನ್ನೋರ್ವ ಅತಿಥಿಗಳಾಗಿ ಮಾತನಾಡಿದ ಡಾ.ಭಾಗೀರತಿ ಹುಲ್ಲಳ್ಳಿಯವರು. “ವಿದ್ಯಾರ್ಥಿಗಳು ಸರಿಯಾದ ಜೀವನಕ್ರಮವನ್ನು ರೂಢಿಸಿಕೊಳ್ಳಬೇಕು. ಉತ್ತಮ ಜೀವನಕ್ರಮಕ್ಕೆ ಬೇಕಾದ ದಾರಿಯನ್ನು ತೋರಿಸಲು ಇಂಥ ಶಿಬಿರಗಳು ಸಹಾಯವಾಗುತ್ತವೆ” ಎಂದರು. ಸಿನೀಯರ್ ರೇಂಜರ್ ಶ್ರೀಮತಿ ಜ್ಯೋತಿ ಎಮ್ಮಿ ಮಾತನಾಡಿ ಭಾರತ್ ಸ್ಕೌಟ್ಸ ಮತ್ತು ಗೈಡ್ಸನ ಮಹತ್ವದ ವಿಷಯವಾದ ಗಂಟುಗಳು ಮತ್ತು ಅವುಗಳ ಉಪಯೋಗವನ್ನು ಪ್ರಾಯೋಗಿಕವಾಗಿ ತಿಳಿಸಿದರು. ಕಾರ್ಯಕ್ರಮದಲ್ಲಿ ರೋವರ್ ಮತ್ತು ರೇಂಜರ್ಸ್‌ಗಳು ವಿವಿಧ ಮಾದರಿಯ ಶಿಬಿರೋಪಕರಣಗಳನ್ನು ಮಾಡಿದರು. ನೀಲಾವತಿ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ರೇಂಜರ್ ಲಕ್ಷ್ಮಿ ದಾಸರ ಸ್ವಾಗತಿಸಿದರು. ರೇಂಜರ್ ನಂದಿನಿ ಎರಡನೇ ದಿನದ ವರದಿ, ರೇಂಜರ್ ನೀಲಾವತಿ ಮೂರನೇ ದಿನದ ವರದಿ ನೀಡಿದರು. ರೇಂಜರ್ ಮಹಾದೇವಿ ದಾಸರ ವಂದಿಸಿದರು. ರೋವರ್ ವಿಜಯ ಕಟ್ಟಿಮನಿ ನಿರೂಪಿಸಿದರು. ರೇಂಜರ್ ಲೀಡರ್ ಡಾ. ಸುಮಂಗಲಾ ಮೇಟಿ ಗಂಟುಗಳ ದಿನ ನಿತ್ಯದ ಉಪಯೋಗ ಬಗ್ಗೆ ತಿಳಿಸಿಕೊಟ್ಟರು. ರೋವರ್ ಸ್ಕೌಟ ಲೀಡರ್ ಆದ ಪ್ರೊ.ಪರಸಪ್ಪ ತಳವಾರ ಇವರು ಮಾತನಾಡಿ “ಮನಸ್ಸಿನ ವಿಕಾರಕ್ಕೆ ಅತೀಯಾದ ಮೊಬೈಲ್ ಬಳಕೆ ಕಾರಣ ಅವೆಲ್ಲವನ್ನು ಬಿಟ್ಟು ಇಂಥ ಶಿಬಿರಗಳಲ್ಲಿ ಪಾಲ್ಗೊಂಡರೆ ಮನದ ಏಕಾಗ್ರತೆ ಸಾಧ್ಯ” ಎಂದರು. ಕಾಲೇಜಿನ ಎಲ್ಲ ಬೋದಕ, ಬೋದಕೇತರ ಸಿಬ್ಬಂದಿಉಪಸ್ಥಿತರಿದ್ದರು. ನಂತರ ಶಿಬಿರಾಗ್ನಿ ಕಾರ್ಯಕ್ರಮವನ್ನು ಶಿಬಿರದ ನಾಯಕರು ಉದ್ಘಾಟಿಸಿದರು.

## ಬಳ್ಳಾರಿ



– ದಿನಾಂಕ 11.4.2026 ರಂದು ರಾಜ್ಯ ಮುಖ್ಯ ಆಯುಕ್ತರಾದ ಡಾ. ಪಿ.ಜಿ.ಆರ್. ಸಿಂಧ್ಯರವರು ಬಳ್ಳಾರಿ ಜಿಲ್ಲಾ ಸಂಸ್ಥೆಗೆ ಭೇಟಿ ನೀಡಿ ಜಿಲ್ಲೆಯ ಚಟುವಟಿಕೆಗಳು, ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಶ್ರೀ ಸೋಮಶೇಖರ ರೆಡ್ಡಿ, ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಕಲಬುರಗಿ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದ ಡಾ. ಪಿ.ಜಿ.ಆರ್. ಸಿಂಧ್ಯರವರನ್ನು ಜಿಲ್ಲಾ ಸಂಸ್ಥೆಯಿಂದ ಸನ್ಮಾನಿಸಲಾಯಿತು. ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಎಂ.ಟಿ.ಮಲ್ಲೇಶ್, ಶ್ರೀ ಶಿವಾಜಿರಾವ್, ಜಿಲ್ಲಾ ಸ್ಕೌಟ್ ಆಯುಕ್ತರಾದ ಡಾ. ಕುಪ್ಪಗಲ್ ವೀರೇಶ್, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ.ಪ್ರಭಾಕರ್ ಭಟ್, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಎಸ್.ವಿಜಯಸಿಂಹ, ಜಿಲ್ಲಾ ಖಜಾಂಚಿ ಶ್ರೀ ಪ್ರಭಾಕರ್, ಜಿಲ್ಲಾ ತರಬೇತಿ ಆಯುಕ್ತರುಗಳಾದ ಶ್ರೀ ಎಂ.ನಾಗರಾಜ್, ಶ್ರೀಮತಿ ಜ್ಯೋತಿ, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಎಂ.ದೊಡ್ಡ ಬಸಪ್ಪ ಇತರರು ಭಾಗವಹಿಸಿದ್ದರು

## ಬೆಂಗಳೂರು ಗ್ರಾಮಾಂತರ



– ದಿನಾಂಕ 6 ರಿಂದ 10 ಏಪ್ರಿಲ್ 2026ರ ವರೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರದ ಕಾರ್ಮಲ್ ಜ್ಯೋತಿ ಶಾಲೆಯಲ್ಲಿ ಬೇಸಿಗೆ ಶಿಬಿರ ಏರ್ಪಡಿಸಲಾಗಿತ್ತು. ಏಪ್ರಿಲ್ 10 ರಂದು ದೊಡ್ಡಬೆಳವಂಗಲ ಹುಲುಕುಡಿಬೆಟ್ಟ ಇಲ್ಲಿಗೆ ಸ್ಕೌಟ್ಸ್–ಗೈಡ್ಸ್‌ಗಳಿಂದ ಚಾರಣ ಶಿಬಿರವನ್ನು ಏರ್ಪಡಿಸಲಾಗಿತು. ಶಿಬಿರದಲ್ಲಿ ಸ್ಕೌಟ್ ಮಾಸ್ಟರ್ ಶ್ರೀ ವೆಂಕಟೇಶ್, ಗೈಡ್ ಕ್ಯಾಪ್ಟನ್ ಶ್ರೀಮತಿ ರಾಜೇಶ್ವರಿ, ಶ್ರೀಮತಿ ತ್ರಿವೇಣಿ, ರೂರಲ್ ಎಸ್.ಜಿ.ವಿ. ಶ್ರೀನಿಹಾಲ್ ಇತರರು ಭಾಗವಹಿಸಿದ್ದರು.

## ಚಿಕ್ಕಬಳ್ಳಾಪುರ



–ದಿನಾಂಕ : 01.03.2026 ರಿಂದ 09.04.2026ರ ವರೆಗೆ ಬಾಗೇಪಲ್ಲಿ ಸ್ಥಳೀಯ ಸಂಸ್ಥೆಯ ಸರ್ಕಾರಿ ಬಾಲಕರ ಪ್ರೌಢ ಶಾಲೆ ಬಾಗೇಪಲ್ಲಿ ಇಲ್ಲಿ ಶಾಲಾ ಮಟ್ಟದಲ್ಲಿ 2026–27ನೇ ಸಾಲಿನ ಬೇಸಿಗೆ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ದಳ ನಾಯಕಿ ಶ್ರೀಮತಿ ಕೀರ್ತಿಬಸಪ್ಪ ಲಗಳಿರವರು ವಿವಿಧ ಚಟುವಟಿಕೆಗಳನ್ನು ಮಾಡಿಸಿದರು.



ದಿನಾಂಕ : 09.04.2026 ರಿಂದ 11.04.2026ರ ವರಿಗೆ ಗೌರಿಬಿದನೂರು ಸ್ಥಳೀಯ ಸಂಸ್ಥೆಯ ಆಶ್ರಯದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಉಚ್ಚೋದನಹಳ್ಳಿ ಶಾಲಾ ಮಟ್ಟದಲ್ಲಿ 2026–27ನೇ ಸಾಲಿನ ಬೇಸಿಗೆ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಸ್ಕೌಟ್ ವಿದ್ಯಾರ್ಥಿಗಳಿಗೆ ಬುದ್ಧ, ಬಸವ, ಅಂಬೇಡ್ಕರ್, ರವರಕುರಿತು ಮಾಹಿತಿ ನೀಡಲಾಯಿತು. ವಿವಿಧ ಜಾತಿಯ ಗಿಡಗಳಾದ ಪೆನ್ಸಿಲ್‌ಕಟ್, ಅರೇಕಾಪಾಂ, ತುಜಾ, ಚೈನಾ, ಡಾಲ್, ಕ್ರೊಟಾನ್ ಗಿಡಗಳನ್ನು ಶಾಲಾ ಆವರಣದಲ್ಲಿ ಹಾಕಲಾಯಿತು.



– ದಿನಾಂಕ : 21.04.2026 ರಿಂದ 30.04.2026ರ ವರಗೆ ಗುಡಿಬಂಡೆ ಸ್ಥಳೀಯ ಸಂಸ್ಥೆಯ ಆಶ್ರಯದಲ್ಲಿ ಪಿ.ಎಂ.ಶ್ರೀ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸೋಮೇನಹಳ್ಳಿ ಶಾಲಾ ಮಟ್ಟದಲ್ಲಿ 2026–27ನೇ ಸಾಲಿನ ವಿಶೇಷ ಬೇಸಿಗೆ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಗುಡಿಬಂಡೆ ತಾಲ್ಲೂಕಿನ ಮಾನ್ಯ ಶಾಸಕರಾದ ಶ್ರೀ ಸುಬ್ಬರೆಡ್ಡಿರವರು ದೀಪ ಬೆಳಗುವ ಮೂಲಕ ಶಿಬಿರವನ್ನು ಉದ್ಘಾಟನೆ ಮಾಡಿ ಮಾತನಾಡಿದರು ಈ ಸಂದರ್ಭದಲ್ಲಿ ಶಿಕ್ಷಣ ಇಲಾಖೆ ಅಧಿಕಾರಿಗಳು ಹಾಗೂ ಚಿಕ್ಕಬಳ್ಳಾಪುರ ಸಂಘಟಕರು ಭಾಗವಹಿಸಿದರು. ಸುಮಾರು 200–250 ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.




– ದಿನಾಂಕ : 17.04.2026 ರಂದು ಗೌರಿಬಿದನೂರು ಸ್ಥಳೀಯ ಸಂಸ್ಥೆಯ ಸರ್ಕಾರಿ ಪ್ರಥಮದರ್ಜೆ ಕಾಲೇಜು ಮಟ್ಟದಲ್ಲಿ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಕೆಲವು ವಿದ್ಯಾರ್ಥಿಗಳು ರಕ್ತದಾನ ಮಾಡಿದರು. ರಕ್ತದಾನ ಮಾಡಿದ ದಾನಿಗಳಿಗೆ ಹಣ್ಣು, ಜ್ಯೂಸ್, ನೀಡುವ ಸೇವ ಕಾರ್ಯದಲ್ಲಿ ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್ ವಿದ್ಯಾರ್ಥಿಗಳು ಸೇವೆ ಸಲ್ಲಿಸಿದರು.

## ದಕ್ಷಿಣ ಕನ್ನಡ




ದಿನಾಂಕ 10.03.2026 ರಂದು ಸ್ವಸ್ತಿಕ ಇಂಟರ್ ನ್ಯಾಷನಲ್ ಸ್ಕೂಲ್ ಆಫ್ ಬ್ಯುಸಿನೆಸ್, ಉರ್ವ ಸ್ಟೋರ್ ಇಲ್ಲಿನ ರೋವರ್–ರೇಂಜರ್ ವಿದ್ಯಾರ್ಥಿಗಳು ಹಸಿಕಸ–ಒಣಕಸ ಇದರ ಬಗ್ಗೆ ಮನೆ–ಮನೆಗೆ ತೆರಳಿ ಮಾಹಿತಿಯನ್ನು ನೀಡಿದರು.



– ದಿನಾಂಕ 14.03.2026 ರಂದು ಡೆಲ್ಲಿ ಪಬ್ಲಿಕ್ ಶಾಲೆಯ ಸ್ಕೌಟ್–ಗೈಡ್ ವಿದ್ಯಾರ್ಥಿಗಳು ಸುರತ್ಕಲ್ ರೈಲ್ವೇ ಸ್ಟೇಷನ್‌ನಲ್ಲಿ ಸ್ವಚ್ಛತಾ ಅಭಿಯಾನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು.



–ಶ್ರೀ ನಾರಾಯಣಗುರು ಶಾಲೆ, ಮುಲ್ಕಿ ಇಲ್ಲಿಯ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಗುರುಜ್ಯೋತಿ ವಿಭಾಗದ ವತಿಯಿಂದ ದಿನಾಂಕ 17.03.2026 ರಂದು

ಶ್ರೀ ನಾರಾಯಣ ಗುರು ಶಾಲೆಯಲ್ಲಿ ಬೇಸಿಗೆ ಶಿಬಿರದ ಉದ್ಘಾಟನಾ ಸಮಾರಂಭವು ನಡೆಯಿತು. ಅಧ್ಯಕ್ಷತೆಯನ್ನು ಮುಲ್ಕಿ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀಮತಿ ಸರೋಜಿನಿ ವಹಿಸಿದ್ದರು. ಕಾರ್ಯಕ್ರಮವನ್ನು ನಾರಾಯಣಗುರು ವಿದ್ಯಾಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಬಾಲಚಂದ್ರ ಗಿಡಕ್ಕೆ ನೀರುಣಿಸುವ ಮೂಲಕ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಪ್ರಾಂಶುಪಾಲರಾದ ಶ್ರೀ ಯತೀಶ್ ಅಮೀನ್, ಮುಖ್ಯೋಪಾಧ್ಯಾಯಿನಿ ಹಾಗೂ ಕಬ್ ಮಾಸ್ಟರ್ ಶ್ರೀಮತಿ ಗೀತಾ ಶೆಟ್ಟಿ, ಸಂಸ್ಥೆಯ ಆಡಳಿತಾಧಿಕಾರಿ ಶ್ರೀಮತಿ ಮಂಜುಳಾ ಕೆ.ವಿ. ಉಪಸ್ಥಿತರಿದ್ದರು. ಕಬ್ ಮಾಸ್ಟರ್ ಶ್ರೀಮತಿ ವಾಣಿ, ಕಾರ್ಯಕ್ರಮ ನಿರೂಪಿಸಿದರು, ಗೈಡ್ ಕ್ಯಾಪ್ಟನ್ ಶ್ರೀಮತಿ ರಶ್ಮಿತಾ ಸ್ವಾಗತಿಸಿದರು, ಫ್ಲಾಕ್ ಲೀಡರ್ ಶ್ರೀಮತಿ ಸುರೇಖಾ ವಂದಿಸಿದರು. ಈ ಶಿಬಿರದಲ್ಲಿ ಒಟ್ಟು 160 ವಿದ್ಯಾರ್ಥಿಗಳು ಭಾಗವಹಿಸಿದ್ದರು.




– ದಿನಾಂಕ 25.03.2026 ರಂದು ಮುಸ್ಲಿಂ ಶಿಕ್ಷಣ ಸಂಸ್ಥೆಗಳ ಒಕ್ಕೂಟ (ಮೀಫ್) ಕೇಂದ್ರ ಸಮಿತಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ದ.ಕ. ಜಿಲ್ಲೆ ಇದರ ಜಂಟಿ ಆಶ್ರಯದಲ್ಲಿ ದ.ಕ. ಮತ್ತು ಉಡುಪಿ ಜಿಲ್ಲೆಯ 48 ವಿದ್ಯಾ ಸಂಸ್ಥೆಗಳ 103 ಶಿಕ್ಷಕ–ಶಿಕ್ಷಕಿಯರಿಗೆ ಜಿಲ್ಲಾ ತರಬೇತಿ ಕೇಂದ್ರ, ಪಿಲಿಕುಳ ಇಲ್ಲಿ ಸ್ಕೌಟ್–ಗೈಡ್‌ನ ಒಂದು ದಿನದ ಮಾಹಿತಿ ಶಿಬಿರ ನಡೆಯಿತು. ದ.ಕ. ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಎಂ. ಮೋಹನ್ ಆಳ್ವ ಶಿಬಿರವನ್ನು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಮೀಫ್ ಅಧ್ಯಕ್ಷ ಶ್ರೀ ಮೂಸಬ್ಬ ಪಿ. ಬ್ಯಾರಿಜೋಕಟ್ಟೆ ವಹಿಸಿದ್ದರು. ತರಬೇತುದಾರರಾಗಿ ವಯಸ್ಕ ಸಂಪನ್ಮೂಲ ವ್ಯಕ್ತಿಯಾದ ಶ್ರೀಮತಿ ಫೆಲ್ಸಿ ಫೆರ್ನಾಂಡಿಸ್, ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ. ತುಂಬೆ, ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್. ಭಾಗವಹಿಸಿದ್ದರು. ಮೀಫ್ ಉಪಾಧ್ಯಕ್ಷ ಶ್ರೀ ಪರ್ವೇಜ್ ಆಲಿ, ಪ್ರಧಾನ ಕಾರ್ಯದರ್ಶಿ ಶ್ರೀ ರಿಯಾಜ್ ಅಹಮ್ಮದ್ ಕೆ.ಬಿ, ಕಾರ್ಯದರ್ಶಿ ಶ್ರೀ ಅನ್ವರ್ ಹುಸೇನ್ ಗೂಡಿನ ಬಳಿ, ಶ್ರೀ ಬಿ.ಎ. ಇಕ್ಬಾಲ್, ಶ್ರೀ ಮಹಮ್ಮದ್ ಶಹಮ್, ಶ್ರೀ ಅಜೀಜ್ ಅಂಬಾರ್ ವಾಲಿ ಉಪಸ್ಥಿತರಿದ್ದರು. ಶ್ರೀ ಮಹಮ್ಮದ್ ಶಾರಿಕ್ ಕಾರ್ಯಕ್ರಮ ನಿರೂಪಿಸಿದರು. ಸಂಚಾಲಕ ಶ್ರೀ ಶೇಖ್ ರಹಮತುಲ್ಲಾ ವಂದಿಸಿದರು.



– **New mangaluru Port Authority** ನಡೆಸುತ್ತಿರುವ **Maritime Day** ಕಾರ್ಯಕ್ರಮದಲ್ಲಿ ದಿನಾಂಕ 30.03.2026 ರಂದು ಬೆಳಿಗ್ಗೆ 7.00 ಗಂಟೆಗೆ ಪಣಂಬೂರು ಸಮುದ್ರ ಕಿನಾರೆಯಲ್ಲಿ ನಡೆದ ಸ್ವಚ್ಛತಾ ಕಾರ್ಯಕ್ರಮದಲ್ಲಿ ಕೋಸ್ಟ್ ಗಾರ್ಡ್, ಫೈರ್ ಹಾಗೂ ಇತರ ಸಂಸ್ಥೆಗಳೊಂದಿಗೆ ಭಾರತ್ ಸ್ಕೌಟ್ ಮತ್ತು ಗೈಡ್ಸ್ ದ.ಕ. ಜಿಲ್ಲಾ ಸಂಸ್ಥೆಯ ಸೀ ಸ್ಕೌಟ್ ಆಯುಕ್ತರಾದ ಡಾ. ರಾಹುಲ್, ಜಿಲ್ಲಾ ಸ್ಕೌಟ್ ಆಯುಕ್ತರಾದ ಶ್ರೀ ಬಿ.ಎಂ. ತುಂಬೆ, ಸುರತ್ಕಲ್ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ದಯಾಕರ್ ಕೆ., ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್‌ಕುಮಾರ್ ಕೆ.ಎಸ್., ಸ್ವಸ್ತಿಕ ಸ್ಕೂಲ್‌ಆಫ್ ಬ್ಯುಸಿನೆಸ್ ಕಾಲೇಜಿನ ರೋವರ್ಸ್–ರೇಂಜರ್ಸ್‌ಗಳು, ರೇಂಜರ್ ಲೀಡರ್ ಶ್ರೀಮತಿ ಪೂರ್ಣಿಮ ಭಾಗವಹಿಸಿದರು.

## ದಾವಣಗೆರೆ





– ದಿನಾಂಕ 18–03–2026 ರಂದು ಶ್ರೀ ಸಿದ್ದಗಂಗಾ ಸ್ಥಳೀಯ ಸಂಸ್ಥೆ ದಾವಣಗೆರೆ ವತಿಯಿಂದ ಬೇಸಿಗೆ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ಧ್ವಜಾರೋಹಣದ ನಂತರ ದಾವಣಗೆರೆ ಸಮೀಪದ ಬಾತಿ ಗ್ರಾಮದ ಮೈತ್ರಿ ವೃದ್ಧಾಶ್ರಮಕ್ಕೆ ಭೇಟಿ ನೀಡಲಾಯಿತು. ವಯೋವೃದ್ಧರಿಗೆ ಹಣ್ಣು, ಹಂಪಲು, ಉಡುಪು ಇನ್ನಿತರೆ ಅಗತ್ಯ ವಸ್ತುಗಳನ್ನು ವಿತರಿಸಿ, ಪೋಷಕರ ಮಹತ್ವ ಅವರ ಪ್ರೀತಿ, ತ್ಯಾಗ ಪರಿಶ್ರಮದ ಬಗ್ಗೆ ಪೋಷಕರನ್ನು ಇಳಿ ವಯಸ್ಸಿನಲ್ಲಿ ಹೇಗೆ ಪೋಷಿಸಬೇಕೆನ್ನುವ ಬಗ್ಗೆ ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಮಕ್ಕಳಿಗೆ ತಿಳಿಸಿದರು. ಈ ಸಂದರ್ಭದಲ್ಲಿ ಸ್ಕೌಟ್ ಮಾಸ್ಟರ್‌ಗಳು ಹಾಗೂ ಗೈಡ್ ಕ್ಯಾಪ್ಟನ್‌ಗಳು ಉಪಸ್ಥಿತರಿದ್ದರು. ಶ್ರೀ ಮಹೇಶ್ ಎಂ.ಸಿ., ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಶಿಬಿರವನ್ನು ನಡೆಸಿಕೊಟ್ಟರು.






– ದಿನಾಂಕ 16–03–2026 ರಿಂದ 18–03–2026 ರವರೆಗೆ ದಾವಣಗೆರೆ ದಕ್ಷಿಣ ಸ್ಥಳೀಯ ಸಂಸ್ಥೆಯ ಜೈನ್ ವಿದ್ಯಾಲಯ ಶಾಲೆಯಲ್ಲಿ ಬನ್ನೀಸ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರಕ್ಕೆ ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಭೇಟಿ ನೀಡಿ ಅಭಿನಯ ಗೀತೆಗಳನ್ನು ಹೇಳಿಕೊಟ್ಟರು. ಶ್ರೀಮತಿ ಮಂಜುಳ ಮುಖ್ಯೋಪಾಧ್ಯಾಯರು ಗಿಡಗಳಿಗೆ ನೀರನ್ನು ಹಾಕುವ ಮೂಲಕ ಶಿಬಿರವನ್ನು ಉದ್ಘಾಟನೆ ಮಾಡಿದರು.



–ದಿನಾಂಕ 28–03–2026 ರಂದು ವಿಶ್ವ ಚೇತನ ಶಾಲೆಯ ಶಿಕ್ಷಕರಿಗೆ ಪ್ರಾರಂಭಿಕ ಮಾಹಿತಿ ಶಿಬಿರವನ್ನು ಆಯೋಜಿಸಲಾಗಿತ್ತು. ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ತುಳಸಾಮಣಿ, ಜಿಲ್ಲಾ ತರಬೇತಿ ಆಯುಕ್ತರು ಗೈಡ್, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಶಿಬಿರವನ್ನು ನಡೆಸಿಕೊಟ್ಟರು. ಶಾಲಾ ಆಡಳಿತ ಅಧಿಕಾರಿಗಳಾದ ಶ್ರೀಮತಿ ಶಾಮಲಾ, ಕೋ ಆರ್ಡಿನೇಟರ್ ಶ್ರೀಮತಿ ಅಪೇಕ್ಷ ಮತ್ತು ಶ್ರೀಮತಿ ಸ್ಮಿತಾರವರ ಸಹಕಾರದಿಂದ 30 ಶಿಕ್ಷಕಿಯರು ಈ ಶಿಬಿರದಲ್ಲಿ ಭಾಗವಹಿಸಿದ್ದರು.

– ದಿನಾಂಕ 06–04–2026 ರಿಂದ 11–04–2026 ರವರೆಗೆ ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಬಾಪೂಜಿ ಹೈಯರ್ ಪ್ರೈಮರಿ ಇಂಗ್ಲೀಷ್ ಶಾಲೆಯಲ್ಲಿ

ಬೇಸಿಗೆ ಶಿಬಿರವನ್ನು ಆಯೋಜಿಸಲಾಗಿತ್ತು. ಶಾಲೆಯ ಮುಖ್ಯಸ್ಥರು ಮತ್ತು ಪ್ರಾಂಶುಪಾಲರಾದ ಶ್ರೀಮತಿ ಜೆ.ಎಸ್. ವನಿತಾರವರು ಬೆಂಬಲ ನೀಡಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಟಿ.ಎಸ್. ಶಿವಣ್ಣ, ತರಬೇತಿ ನಾಯಕರು, ಶ್ರೀಮತಿ ರತ್ನ ಎಂ., ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಭಾಗವಹಿಸಿದ್ದರು. ಬೇಸಿಗೆ ಶಿಬಿರದ ಅಂಗವಾಗಿ ಕೊಂಡಜ್ಜಿ ಬಸಪ್ಪ ಸ್ಕೌಟ್ ಗೈಡ್ ರಾಜ್ಯ ತರಬೇತಿ ಕೇಂದ್ರ, ಕೊಂಡಜ್ಜಿಯಲ್ಲಿ ಕುಕ್ಕಿಂಗ್ ಪ್ರಾವಿಣ್ಯತಾ ಪದಕದ ಪ್ರಾಯೋಗಿಕ ತರಬೇತಿ ನಡೆಸಲಾಯಿತು.



– ದಿನಾಂಕ 15–04–2026 ರಿಂದ 17–04–2026 ರವರೆಗೆ ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ವತಿಯಿಂದ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಮತ್ತು ಕಾರವಾರದಲ್ಲಿ ಪ್ರಕೃತಿ ಅಧ್ಯಯನ ಮತ್ತು ಚಾರಣ ಶಿಬಿರವನ್ನು ಆಯೋಜಿಸಲಾಗಿತ್ತು. ಶ್ರೀ ತರಳಬಾಳು ಜಗದ್ಗುರು ವಸತಿಯುತ ಶಾಲೆ, ಪಿ.ಎಸ್.ಎಸ್.ಇ.ಎಂ.ಆರ್. ಶಾಲೆ, ಬಾಪೂಜಿ ಇಂಗ್ಲೀಷ್ ಮಾಧ್ಯಮ ಶಾಲೆ, ಅನ್‌ಮೋಲ್ ಶಾಲೆ ಮತ್ತು ಮಾಗನೂರು ಬಸಪ್ಪ ಶಾಲೆಯ 130 ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಭಾಗವಹಿಸಿದ್ದರು. ಶ್ರೀ ಬಿ.ಡಿ. ಫರ್ನಾಂಡಿಸ್ ಹೊನ್ನಾವರ ಇವರು ಶಿಬಿರದ ನಾಯಕತ್ವ ವಹಿಸಿದ್ದರು. ಶ್ರೀ ರವೀಂದ್ರಸ್ವಾಮಿ ಟಿ.ಎಂ., ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು ಶಿಬಿರದ ನೇತೃತ್ವ ವಹಿಸಿದ್ದರು. ಜಿಲ್ಲಾ ಪದಾಧಿಕಾರಿಗಳು ಭಾಗವಹಿಸಿದ್ದರು.



– ದಿನಾಂಕ 20–04–2026 ರಂದು ಧ.ರಾ.ಮ ಸ್ಕೌಟ್ ಭವನದಲ್ಲಿ "ಬಸವ ಜಯಂತಿ" ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಶ್ರೀ ಮುರುಘರಾಜೇಂದ್ರ ಜೆ.ಚಿಗಟೇರಿ ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎ.ಪಿ. ಷಡಾಕ್ಷರಪ್ಪ ಜಿಲ್ಲಾ ಸ್ಕೌಟ್ ಆಯುಕ್ತರು ಮುಂತಾದವರು ಉಪಸ್ಥಿತರಿದ್ದರು.



## ಹಾಸನ

– "ಮಕ್ಕಳಲ್ಲಿ ವೈಜ್ಞಾನಿಕ ಚಿಂತನೆ ಬೆಳೆಸುವುದೇ ಶಿಕ್ಷಣದ ಮುಖ್ಯ ಉದ್ದೇಶ ಮಕ್ಕಳಲ್ಲಿ ವೈಜ್ಞಾನಿಕ ಅರಿವು ಮೂಡಿಸುವುದರ ಮೂಲಕ ವೈಜ್ಞಾನಿಕ ಚಿಂತನೆಯನ್ನು ವೃದ್ಧಿಸುವುದೇ ಶಿಕ್ಷಣದ ಪ್ರಮುಖ ಉದ್ದೇಶವಾಗಿದ್ದು, ನಮ್ಮ ಸಂವಿಧಾನದ ಪೀಠಿಕೆ ಇದನ್ನೇ ಒತ್ತಿಹೇಳುತ್ತದೆ" ಎಂದು ತಾಲ್ಲೂಕು ಸ್ಕೌಟ್ಸ್ ಗೈಡ್ಸ್ ಸಹ ಕಾರ್ಯದರ್ಶಿ ಹಾಗೂ ಸ್ಕೌಟ್ ಮಾಸ್ಟರ್ ಶ್ರೀ ಎಚ್.ಡಿ. ಕುಮಾರ್ ಅಭಿಪ್ರಾಯಪಟ್ಟರು. ಅವರು ಭಾರತ್ ಸ್ಕೌಟ್ಸ್ & ಗೈಡ್ಸ್ ಸ್ಥಳೀಯ ಸಂಸ್ಥೆ, ಆಲೂರು ಹಾಗೂ ಇಕೋ ಕ್ಲಬ್ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ತಾಳೂರು ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ 'ರಾಷ್ಟ್ರೀಯ ವಿಜ್ಞಾನ ದಿನಾಚರಣೆ'ಯಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದರು. ರಾಜ್ಯ ಸರಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ಶ್ರೀ ಡಿ.ಎಂ. ವರದರಾಜು ಮಾತನಾಡಿ "ರಾಷ್ಟ್ರೀಯ ವಿಜ್ಞಾನ ದಿನ ಎಲ್ಲ ಭಾರತೀಯರೂ ಒಂದಾಗಿ, ವಿಜ್ಞಾನದ ಶಕ್ತಿಯನ್ನು ಸಂಭ್ರಮಿಸುವ ಸಂದರ್ಭವಾಗಿದೆ. ಇದು ವೈಜ್ಞಾನಿಕ ಸಾಧನೆಗಳನ್ನು ಪ್ರದರ್ಶಿಸಲು ವೇದಿಕೆ ಒದಗಿಸುತ್ತದೆ, ವೈಜ್ಞಾನಿಕ ಆಲೋಚನೆಯನ್ನು ಉತ್ತೇಜಿಸುತ್ತದೆ, ಮತ್ತು ಭಾರತದಲ್ಲಿ ವೈಜ್ಞಾನಿಕ ಸಂಶೋಧನೆ ಮತ್ತು ಆವಿಷ್ಕಾರಗಳಿಗೆ ಬೆಂಬಲ ನೀಡುತ್ತದೆ" ಎಂದರು. ಆಲೂರು ತಾಲ್ಲೂಕು ಕಾರ್ಯದರ್ಶಿ ಹಾಗೂ ತಾಳೂರು ಶಾಲೆಯ ಮುಖ್ಯ ಶಿಕ್ಷಕ ಕೊಟ್ರೇಶ್ ಎಸ್. ಉಪ್ಪಾರ್ ಮಾತನಾಡಿ "ಸಾಮಾಜಿಕ ಮೌಢ್ಯಗಳನ್ನು ಧಿಕ್ಕರಿಸಲು ವೈಜ್ಞಾನಿಕ ಮನೋವೃತ್ತಿ ಅತ್ಯವಶ್ಯಕ. ಚಿಕ್ಕ ವಯೋಮಾನದಿಂದಲೇ ಮಕ್ಕಳಲ್ಲಿ ವೈಜ್ಞಾನಿಕ ಆಲೋಚನೆಗಳನ್ನು ಬಿತ್ತುವುದರ ಮುಖೇನ ವೈಚಾರಿಕ ಪ್ರಜ್ಞೆಯನ್ನುಂಟು ಮಾಡುವುದು ನಾಗರಿಕರಾದ ನಮ್ಮೆಲ್ಲರ ಬಹುದೊಡ್ಡ ಜವಬ್ದಾರಿಯಾಗಿದೆ" ಎಂದರು. ಈ ಸಂದರ್ಭದಲ್ಲಿ ಹಿರಿಯ ಶಿಕ್ಷಕಿ ಶ್ರೀಮತಿ ವಿ. ರವಿತ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಅತಿಥಿ ಶಿಕ್ಷಕಿ ಶ್ರೀಮತಿ ಭಾಗ್ಯಮ್ಮ ಹಾಗೂ ಸ್ಕೌಟ್ಸ್ ಗೈಡ್ಸ್ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



– ಸ್ಕೌಟ್ಸ್ ಅಂಡ್ ಗೈಡ್ಸ್ ಸಂಸ್ಥಾಪಕ ದಿನಾಚರಣೆ ಪ್ರಯುಕ್ತ 1) ರಸ್ತೆ ಸುರಕ್ಷತಾ ಜನಜಾಗೃತಿ ಜಾಥಾ 2) ದ್ವಿತೀಯ ಸೋಪಾನ ಪರೀಕ್ಷಾ ಶಿಬಿರ. 3) ಸಮವಸ್ತ್ರ ವಿತರಣಾ ಕಾರ್ಯಕ್ರಮ. ಈ ಎಲ್ಲಾ ಕಾರ್ಯಕ್ರಮಗಳನ್ನು ಮೌಂಟ್ ಕಾರ್ಮೆಲ್ ಶಾಲೆಯ ಸಹಯೋಗದೊಂದಿಗೆ ಸ್ಥಳೀಯ ಸಂಸ್ಥೆಯಿಂದ ಯಶಸ್ವಿಯಾಗಿ ಜರುಗಿತು. ಕಾರ್ಯಕ್ರಮಕ್ಕೆ ಜಿಲ್ಲಾ ಸಂಸ್ಥೆಯಿಂದ ಶ್ರೀ ಸುರೇಶ್ ಗುರೂಜಿ ಕಾರ್ಯದರ್ಶಿಗಳು, ಶ್ರೀಮತಿ ಜಯ ರಮೇಶ್, ಜಿಲ್ಲಾ ಆಯುಕ್ತರು (ಗೈಡ್), ಸ್ಥಳೀಯ ಸಂಸ್ಥೆಯಿಂದ ಶ್ರೀ ಪರಮೇಶ್ವರಪ್ಪ ಹೆಚ್., ಕಾರ್ಯದರ್ಶಿಗಳು, ಶ್ರೀಮತಿ ಮಮತಾ, ಸಹ ಕಾರ್ಯದರ್ಶಿಗಳು, ಮೌಂಟ್ ಕಾರ್ಮೆಲ್ ಶಾಲೆಯಿಂದ ಶ್ರೀಮತಿ ಶ್ವೇತಾ, ಶ್ರೀಮತಿ ಮಾನಸ, ಶ್ರೀ ಸಂದೀಪ್, SGR ಪಬ್ಲಿಕ್ ಸ್ಕೂಲ್ ಹಳೇಬೀಡು ಶಾಲೆಯಿಂದ ಶ್ರೀಮತಿ ರಾಧಾ, ಶ್ರೀಮತಿ ಅನಿತಾ, ರೋಟರಿ ಶಾಲೆ ಅರೇಹಳ್ಳಿಯಿಂದ ಶ್ರೀಮತಿ ವಾಣಿ, ಅನುಗ್ರಹ ಶಾಲೆಯಿಂದ ಶ್ರೀಮತಿ ಪೂಜಾ, ಜೆಎಸ್‌ಎಸ್ ನಾರ್ವೆ ಶಾಲೆಯಿಂದ ಶ್ರೀ ಪುಟ್ಟರಾಜ ಸರ್, ಉಈಉಅ ಹಳೇಬೀಡು ಕಾಲೇಜಿನಿಂದ ಶ್ರೀ ರಾಘವೇಂದ್ರ ಭಾಗವಹಿಸಿದರು. ಹಾಗೂ ಫಾದರ್ ಪ್ರಕಾಶ್ ತಾವ್ರೋ ಫಾದರ್ ಪಿಂಟೊ ಅವರ ಸಹಕಾರದಿಂದ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು.




"ಮಹಿಳೆ ಹೆಚ್ಚೆಚ್ಚು ಸಬಲೀಕರಣಗೊಂಡಷ್ಟು ಸಾಮಾಜಿಕ ಸ್ವಾಸ್ಥ್ಯ ಸದೃಢಗೊಂಡು ಕೌಟುಂಬಿಕ ಔನ್ನತ್ಯ ಸಾಧಿಸಲು ಸಹಕಾರಿಯಾಗುತ್ತದೆ" ಎಂದು ಜಿಲ್ಲಾ ಸಹಾಯಕ ಆಯುಕ್ತ ಶ್ರೀ ಎಂ. ಬಾಲಕೃಷ್ಣ ಅಭಿಪ್ರಾಯಪಟ್ಟರು. ಅವರು ಭಾರತ್ ಸ್ಕೌಟ್ಸ್–ಗೈಡ್ಸ್ ಸ್ಥಳೀಯ ಸಂಸ್ಥೆ ಆಲೂರು ವತಿಯಿಂದ ಪಟ್ಟಣದ ವಿಶ್ವೇಶ್ವರಯ್ಯ ಪಬ್ಲಿಕ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಸಸಿಗೆ ನೀರೆರೆಯುವ

ಮೂಲಕ ಉದ್ಘಾಟಿಸಿ ಮಾತನಾಡಿದರು. ತಾಲ್ಲೂಕು ಕಾರ್ಯದರ್ಶಿ ಶ್ರೀ ಕೊಟ್ರೇಶ್, ಶ್ರೀ ಎಸ್. ಉಪ್ಪಾರ್ ಪ್ರಾಸ್ತಾವಿಕವಾಗಿ ಮಾತನಾಡಿ "ಮಹಿಳಾ ಕಾರ್ಮಿಕರ ಸಮಾನತೆಯ ಹಕ್ಕುಗಳಿಗಾಗಿ ಲಂಡನ್ನಿನಲ್ಲಿ ಹದಿನೆಂಟನೇ ಶತಮಾನದಲ್ಲಿ ಪ್ರಾರಂಭವಾದ ಹೋರಾಟ ತದನಂತರ ವಿವಿಧ ಆಯಾಮಗಳನ್ನು ಪಡೆದುಕೊಂಡು ಇಂದು ಜಾಗತಿಕವಾಗಿ ವ್ಯಾಪಿಸಿದೆ" ಎಂದರು. ವಿಶ್ವೇಶ್ವರಯ್ಯ ಕೈಗಾರಿಕಾ ತರಬೇತಿ ಕೇಂದ್ರದ ಕಿರಿಯ ತರಬೇತಿ ಅಧಿಕಾರಿ ಶ್ರೀ ಸಿ.ಎಸ್. ಶಿವಕುಮಾರ್ ಮುಖ್ಯ ಅತಿಥಿಯಾಗಿ ಮಾತನಾಡಿ "ಮಹಿಳೆ ಕೇವಲ ಮನೆಗೆ ಸೀಮಿತವಲ್ಲ, ಅವಳು ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲೂ ಯಶಸ್ಸು ಸಾಧಿಸುತ್ತಾಳೆ ಸಮಾಜದ ಗೌರವವನ್ನು ಕಾಪಾಡುತ್ತಾಳೆ" ಎಂದರು. ಶಾಲಾ ಮುಖ್ಯ ಶಿಕ್ಷಕಿ ಶ್ರೀಮತಿ ಪವಿತ್ರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ "ಭಾರತ್ ಸ್ಕೌಟ್ಸ್–ಗೈಡ್ಸ್ ನಮ್ಮ ಶಾಲೆಯಲ್ಲಿ ಉತ್ತಮ ಕಾರ್ಯ ಮಾಡುತ್ತಿದೆ. ಮಕ್ಕಳ ವಿವಿಧ ಚಟವಟಿಕೆಗಳು ಸಾಮಾನ್ಯ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡುತ್ತವೆ" ಎಂದರು. ಮಹಿಳಾ ದಿನಾಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ವಿವಿಧ ಮನೋರಂಜನಾ ಆಟಗಳಲ್ಲಿ ಜಯಿಸಿದ ಶಿಕ್ಷಕಯರಿಗೆ ವೇದಿಕೆಯಲ್ಲಿ ಬಹುಮಾನ ವಿತರಣೆ ಮಾಡಲಾಯಿತು. ವಿಶ್ವೇಶ್ವರಯ್ಯ ಪಬ್ಲಿಕ್ ಶಾಲೆಯ ಲೇಡಿ ಸ್ಕೌಟ್ ಮಾಸ್ಟರ್ ಶ್ರೀಮತಿ ಶಕುಂತಲಾ, ಗೈಡ್ ನಾಯಕಿಯರಾದ ಶ್ರೀಮತಿ ರೋಹಿಣಿ ಹಾಗೂ ಶ್ರೀಮತಿ ರೂಹಿ ಮತ್ತು ಕಬ್ ಮಾಸ್ಟರ್ ಶ್ರೀ ರಾಮಚಂದ್ರುರವರು ಕಾರ್ಯಕ್ರಮ ನಿರ್ವಹಣೆ ಮಾಡಿದರು.



– "ರಸ್ತೆ ಸುರಕ್ಷತೆಯು ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿದ್ದು, ಸಂಚಾರ ನಿಯಮಗಳನ್ನು ಪಾಲಿಸುವುದು ಜೀವಗಳನ್ನು ಉಳಿಸಲು ಅತ್ಯಗತ್ಯ ಎಂದು ಭಾರತ್ ಸ್ಕೌಟ್ಸ್–ಗೈಡ್ಸ್ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಅಭಿಪ್ರಾಯಪಟ್ಟರು. ಅವರು ಭಾರತ್ ಸ್ಕೌಟ್ಸ್ ಗೈಡ್ಸ್ ಸ್ಥಳೀಯ ಸಂಸ್ಥೆ ಆಲೂರು ವತಿಯಿಂದ ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ರಸ್ತೆ ಸಪ್ತಾಹ ಉದ್ಘಾಟಿಸಿ ಮಾತನಾಡಿದರು. ಎಸ್.ವಿ. ಪಬ್ಲಿಕ್ ಶಾಲೆಯ ಪ್ರಾಂಶುಪಾಲೆ ಶ್ರೀಮತಿ ಎಸ್. ಎನ್. ನಳಿನಾಗಿರೀಶ್ ಮಾತನಾಡಿ "ರಸ್ತೆ ಸುರಕ್ಷತೆ ಎಂದರೆ ಸಂಚಾರ ನಿಯಮಗಳನ್ನು ಪಾಲಿಸುವ ಮೂಲಕ ಚಾಲಕರು, ಪಾದಚಾರಿಗಳು ಮತ್ತು ಪ್ರಯಾಣಿಕರನ್ನು ರಸ್ತೆ ಅಪಘಾತಗಳಿಂದ ರಕ್ಷಿಸುವ ಕ್ರಮಗಳಾಗಿವೆ. ಪ್ರತಿಯೊಬ್ಬರೂ ಇವುಗಳನ್ನು ಪಾಲಿಸಿದಾಗ ಮಾತ್ರ ಸಮಾಜ ಸ್ವಾಸ್ಥ್ಯವಾಗಿರಲು ಸಾಧ್ಯ" ಎಂದರು.



"ಸಾಮಾಜಿಕ, ಕೌಟುಂಬಿಕ ಹಾಗೂ ಶೈಕ್ಷಣಿಕ ಮೌಲ್ಯಗಳು ಕುಸಿಯುತ್ತಿರುವ ವರ್ತಮಾನದ ಸಂದರ್ಭದಲ್ಲಿ ಸ್ಕೌಟ್ಸ್ ಗೈಡ್ಸ್ ಮಕ್ಕಳಲ್ಲಿ ಸದ್ಗುಣಗಳನ್ನು ಬೆಳೆಸಿ ಉತ್ತಮ ನಾಗರೀಕರನ್ನಾಗಿ ಸೃಜಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತದೆ" ಎಂದು ಶ್ರೀ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯ ಕಾರ್ಯದರ್ಶಿ ಶ್ರೀ ರಂಗೇಗೌಡ ಅಭಿಪ್ರಾಯಪಟ್ಟರು. ಅವರು ತಮ್ಮ ಶಾಲೆಯಲ್ಲಿ ಭಾರತ್ ಸ್ಕೌಟ್ಸ್–ಗೈಡ್ಸ್ ಸ್ಥಳೀಯ ಸಂಸ್ಥೆ ಆಲೂರು ವತಿಯಿಂದ ಹಮ್ಮಿಕೊಂಡಿದ್ದ ದಳ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಭಾರತ್ ಸ್ಕೌಟ್ಸ್–ಗೈಡ್ಸ್ ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ "ಸ್ಕೌಟಿಂಗ್ ಈಸ್ ಔಟಿಂಗ್ ಎಂಬಂತೆ ಮಕ್ಕಳಿಗೆ ಈ ಚಳವಳಿ ಹೊರಜಗತ್ತಿನ ಪರಿಚಯ ಮಾಡುವುದರ ಜೊತೆಗೆ ಸಾಮಾಜಿಕ ಜ್ಞಾನವನ್ನು ಬೆಳಸುತ್ತದೆ. ಶಿಸ್ತು, ಸೇವೆ, ಸಂಯಮದ ಜೊತೆಗೆ ಹಿರಿಯರಿಗೆ, ವೃದ್ಧರಿಗೆ, ದುರ್ಬಲರಿಗೆ ಬಲವಾಗು, ಹೆಗಲಾಗುವ, ಸಹಾಯ ಮಾಡುವ ಉದಾತ್ತ ಗುಣಗಳನ್ನು ಬೆಳೆಸುತ್ತದೆ" ಎಂದರು.

## ಕೊಡಗು



– ಜಿಲ್ಲಾ ಸಂಸ್ಥೆ ಕೊಡಗು ಸ್ಥಳೀಯ ಸಂಸ್ಥೆ ಮಡಿಕೇರಿ ಹಾಗೂ ಜ್ಞಾನ ಜ್ಯೋತಿ ವಿದ್ಯಾ ಸಂಸ್ಥೆ ಮೂರ್ನಾಡು ವತಿಯಿಂದ ಬೇಸಿಗೆ ಶಿಬಿರವನ್ನು ದಿನಾಂಕ 25.03.2026 ರಿಂದ 29.03.2026ರ ವರೆಗೆ ಆಯೋಜಿಸಲಾಗಿ 68 ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ 4 ಜನ ಶಿಕ್ಷಕರು ಮತ್ತು ಆಡಳಿತ ಮಂಡಳಿಯವರು ಭಾಗವಹಿಸಿದ್ದರು.



– ಜಿಲ್ಲಾ ಸಂಸ್ಥೆ ಕೊಡಗು ಸ್ಥಳೀಯ ಸಂಸ್ಥೆ ಕುಶಾಲನಗರ, ಅಂಜೇಲ ವಿದ್ಯಾನಿಕೇತನ ವಿದ್ಯಾ ಸಂಸ್ಥೆಯ ಸಹಯೋಗದ ವತಿಯಿಂದ 11.4.2026 ರಿಂದ 12.4.2026 ರವರೆಗೆ ಬೇಸಿಗೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು ಅಕ್ಕ–ಪಕ್ಕದ ಶಾಲೆಗಳಿಂದ ಕಬ್‌ಬುಲ್‌ಬುಲ್ಸ್, ಸ್ಕೌಟ್ಸ್–ಗೈಡ್ಸ್ ಒಟ್ಟು 180 ವಿದ್ಯಾರ್ಥಿಗಳು ಭಾಗವಹಿಸಿದ್ದು ದಿನಾಂಕ 11.4.2026 ರಂದು ಬೆಳಿಗ್ಗೆ 10 ಗಂಟೆಗೆ ಸರಿಯಾಗಿ ದೀಪ ಬೆಳಗಿಸುವುದರ ಮೂಲಕ ಶಿಬಿರ ಉದ್ಘಾಟನೆಗೊಂಡಿತು. ದಿನಾಂಕ 12.4.2026 ರಂದು ಕೂಡಿಗೆಯ ಶಕ್ತಿ ವೃದ್ಧಾಶ್ರಮ ಕೆ ಅಂಜೇಲ ವಿದ್ಯಾನಿಕೇತನ ವಿದ್ಯಾ ಸಂಸ್ಥೆಯ ಮುಖೋಪಾಧ್ಯಾಯರಾದ ಸಿಸ್ಟರ್ ಅನಿತಾರವರು ಗೈಡ್ ಕ್ಯಾಪ್ಟನ್ ಶ್ರೀಮತಿ ಶಾರವರು ಸ್ಕೌಟ್ ಮಾಸ್ಟರ್ ಶ್ರೀ ವಸಂತ ಫ್ಲಾಕ್ ಲೀಡರ್ ಶ್ರೀಮತಿ ಭವ್ಯರವರು ಬೇಸಿಗೆ ಶಿಬಿರ ಭೇಟಿ ನೀಡಿ ಒಂದು ಬ್ಯಾಗ್ ಅಕ್ಕಿ ಮತ್ತು ಬಿಸ್ಕೆಟ್ ನೀಡಿ ಅವರ ಯೋಗಕ್ಷೇಮವನ್ನು ವಿಚಾರಿಸಿ ಸ್ವಲ್ಪ ಸಮಯ ಅವರೊಂದಿಗೆ ಕಳೆದಿರುತ್ತಾರೆ.

## ರಾಯಚೂರು



ದಿನಾಂಕ : 17–03–2026 ರಂದು ಜಿಲ್ಲಾ ಪಂಚಾಯತ್ ರಾಯಚೂರು ಹಾಗೂ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ಯರಮರಸ್–ರಾಯಚೂರು ಇವರ ಸಹಯೋಗದಲ್ಲಿ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರ

ರಾಯಚೂರು ಇಲ್ಲಿ ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ಕೆರಿಯರ್ ಮೇಳವನ್ನು ಆಯೋಜನೆ ಮಾಡಲಾಯಿತು. ಸದರಿ ಮೇಳದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಜಿಲ್ಲಾ ಸಂಸ್ಥೆ ರಾಯಚೂರು ವತಿಯಿಂದ ಶ್ರೀ ಅಂಬಣ್ಣ ನಾಯಕ ಎಸ್.ಜಿ.ವಿ. ಹಾಗೂ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ರಾಯಚೂರು ರೇಂಜರ್ಸ್ ವಿದ್ಯಾರ್ಥಿನಿಯರು ಸ್ವಯಂ ಸೇವಕರಾಗಿ ಸೇವೆಯನ್ನು ಸಲ್ಲಿಸಿದರು.

– ದಿನಾಂಕ: 24–03–2026 ರಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಕೇಂದ್ರ



(ಡಯಟ್) ಯರಮರಸ್–ರಾಯಚೂರು ಹಾಗೂ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ಇವರುಗಳ ಸಂಯುಕ್ತಾಶ್ರಯದಲ್ಲಿ ಶ್ರೀ ಬಿ. ಬಲರಾಮಕೃಷ್ಣ ಅಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ಶಾರದಾ ಹಾಗೂ ಕಲ್ಮಠ ಆಜಜ ಪ್ರಶಿಕ್ಷಣಾರ್ಥಿಗಳಿಗೆ ಒಂದು ದಿನದ ಪ್ರಾರಂಭಿಕ ಶಿಬಿರವನ್ನು ಖಾದ್ರಿ ಫಂಕ್ಷನ್ ಹಾಲ್ ಮಾನ್ವಿ ಇಲ್ಲಿ ಆಯೋಜನೆ ಮಾಡಲಾಯಿತು. ಶ್ರೀ ಚಂದ್ರಶೇಖರ ದೊಡ್ಡಮನಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರು ಸಸಿಗೆ ನೀರು ಹಾಕುವ ಮೂಲಕ ಶಿಬಿರವನ್ನು ಉದ್ಘಾಟಿಸಿದರು. ಶ್ರೀ ಎಮ್. ರಾಮಲಿಂಗಪ್ಪ ಕಾರ್ಯದರ್ಶಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ನರಸಿಂಹಮೂರ್ತಿ ದೇಸಾಯಿ ಜಂಟಿ ಕಾರ್ಯದರ್ಶಿಗಳು ಎಲ್ಲರನ್ನೂ ಸ್ವಾಗತಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಬಸವರಾಜ ಬೋರೆಡ್ಡಿ ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಗದ್ದಿಬಸಪ್ಪ, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಸೈಯದ್ ಮುಜಾತಾಬ್ ಖಾದ್ರಿ, ಕಾರ್ಯದರ್ಶಿಗಳು ಮಾನ್ವಿ ಪಬ್ಲಿಕ್ ಶಾಲೆ ಮಾನ್ವಿ, ಶ್ರೀ ಮಲ್ಲನಗೌಡ ಠಆಅ ಮಾನ್ವಿ ಇವರು ಆಗಮಿಸಿದ್ದರು. ಶ್ರೀ ಆನಂದ ಸ್ಕೌಟ್ ಮಾಸ್ಟರ್ ಇವರು ಸ್ಕೌಟಿಂಗ್–ಗೈಡಿಂಗ್ ಒಂದು ದಿನದ ಪ್ರಾರಂಭಿಕ ಶಿಬಿರದ ಕುರಿತು ಮಾಹಿತಿಯನ್ನು ನೀಡಿದರು. ಶ್ರೀ ಉದಯಕುಮಾರ್ ಪತ್ತಾರ್ ಸ್ಕೌಟ್ ಮಾಸ್ಟರ್ ಇವರು ಕಾರ್ಯಕ್ರಮವನ್ನು ನಿರೂಪಿಸಿದರು. ಈ ಶಿಬಿರದಲ್ಲಿ 66 ಆಜಜ ಪ್ರಶಿಕ್ಷಣಾರ್ಥಿಗಳು ಭಾಗವಹಿಸಿದ್ದರು.

– ದಿನಾಂಕ : 05–04–2026 ರಂದು ರಾಯಚೂರು ಜಿಲ್ಲೆ ಸಿಂಧನೂರಿನ



ಶ್ರೀ ಕನಕದಾಸ ಕಲ್ಯಾಣ ಮಂಟಪದಲ್ಲಿ, ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ಬೆಂಗಳೂರು, ಹಾಗೂ ರಾಯಚೂರು ಶಾಖೆ, ಸಿಂಧನೂರು ತಾಲೂಕು ಘಟಕದವರು ಹಮ್ಮಿಕೊಂಡಿದ್ದ, 399ನೇ ಶ್ರೀ ಛತ್ರಪತಿ ಶಿವಾಜಿ ಮಹಾರಾಜರವರ ಜಯಂತೋತ್ಸವ ಹಾಗೂ ಜಿಲ್ಲಾ ಸಮಾವೇಶವನ್ನು ಸನ್ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಇವರು ಉದ್ಘಾಟಿಸಿ ಮಾತನಾಡಿದರು. ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿಗೆ ಭಾಜನರಾಗಿದಕ್ಕೆ ಸನ್ಮಾನ್ಯ ಡಾ. ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮಾಜಿ ಸಚಿವರು ಕರ್ನಾಟಕ ಸರ್ಕಾರ ಹಾಗೂ ರಾಜ್ಯ ಮುಖ್ಯ ಆಯುಕ್ತರು ಇವರಿಗೆ ಅಭಿನಂದನಾ ಸಮಾರಂಭವನ್ನು ಇದೇ ಸಂದರ್ಭದಲ್ಲಿ ಆಯೋಜನೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಎಸ್. ಶರಣೇಗೌಡ, ಅಧ್ಯಕ್ಷರು, ಶ್ರೀ ಬೀರಪ್ಪ ಶಂಭೋಜಿ, ಕಾರ್ಯದರ್ಶಿಗಳು, ಶ್ರೀ ಶಿವಪ್ಪ ಹಸಮಕಲ್, ಕಾರ್ಯದರ್ಶಿಗಳು ಮಸ್ಕಿ, ಶ್ರೀ ಅಂಬಣ್ಣ ನಾಯಕ, ಎಸ್.ಜಿ.ವಿ., ಶ್ರೀ ಮೋಹಿದ್ದೀನ್ ಶರೀಫ್ ಸಾಬ್, ALT(S), ಶ್ರೀ ಶ್ರೀನಿವಾಸ ಸುಗಂಧಿ, ಜಂಟಿ ಕಾರ್ಯದರ್ಶಿಗಳು ಮಸ್ಕಿ, ಸ್ಕೌಟ್ ಮಾಸ್ಟರ್ ಶ್ರೀ ಗಂಗಾಧರ, ಶ್ರೀ ಆದಪ್ಪ, ಗೈಡ್ ಕ್ಯಾಪ್ಟನ್ ಶ್ರೀಮತಿ ಆರತಿ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳು ಭಾಗವಹಿಸಿದ್ದರು.

– ದಿನಾಂಕ: 05–04–2026 ರಂದು ಜಿಲ್ಲಾ ಸಂಸ್ಥೆ ರಾಯಚೂರು ಸ್ಥಳೀಯ



ಸಂಸ್ಥೆ ಮಸ್ಕಿ ಸಹಯೋಗದಲ್ಲಿ ಬಯ್ಯಾಪೂರ ಮಹಾಂತಮ್ಮ ಲಿಂಗನಗೌಡ ಪ್ರೈಮರಿ ಸ್ಕೂಲ್ ಮತ್ತು ಜೋಗಿನ್ ರಾಮಣ್ಣ ಸ್ಮಾರಕ ಪ್ರೌಢ ಶಾಲೆಯಲ್ಲಿ ಕಬ್ & ಬುಲ್ –ಬುಲ್ಸ್ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್ ಬೇಸಿಗೆ ಶಿಬಿರದ ಉದ್ಘಾಟನ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಸಿದ್ದಾರೆಡ್ಡಿ ಗಿಣಿವಾರ ಮು.ಗು. ಮತ್ತು ಅಜೀವ ಸದಸ್ಯರು ವಹಿಸಿದ್ದರು. ಶ್ರೀ ಶಿವಪ್ಪ ಹಸಮಕಲ್‌ರವರು ಪ್ರಾರ್ಥನೆ, ಧ್ವಜಗೀತೆ, ಇತಿಹಾಸ, ಗಂಟುಗಳು ಪ್ರಥಮ ಚಿಕಿತ್ಸೆ ಬಗ್ಗೆ ಮಾಹಿತಿ ಮಾಡಿದರು. ವಂದನಾರ್ಪಣೆಯನ್ನು ಶ್ರೀಮತಿ ಅರ್ಚನಾ ನಿರ್ವಹಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ತಮನ್ನಾ ಮಾತನಾಡಿದರು. ಸ್ವಾಗತವನ್ನು ಶ್ರೀಮತಿ ಅದ್ವತಿ ಮಾಡಿದರು. ಶ್ರೀ ಕೃಷ್ಣದೇವರಾಯ ವಿದ್ಯಾ ಸಂಸ್ಥೆ, ಹೊಸಳ್ಳಿ ಕ್ಯಾಂಪ್, ಸಿಂಧನೂರು. ಇಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಸಿಂಧನೂರು ಇವರ ಸಹಯೋಗದೊಂದಿಗೆ ವಿದ್ಯಾರ್ಥಿಗಳಿಗಾಗಿ ವಿಶೇಷ ಬೇಸಿಗೆ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ದಿನಾಂಕ: 14–04–2026 ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್



ಕರ್ನಾಟಕ, ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಜಿಲ್ಲಾ ಸ್ಕೌಟ್ ಭವನ ರಾಯಚೂರು ಇಲ್ಲಿ ವಿಶ್ವಜ್ಞಾನಿ, ಭಾರತ ರತ್ನ, ಸಂವಿಧಾನ ಶಿಲ್ಪಿ, ಮಹಾಮಾನವತಾವಾದಿ, ಹೆಮ್ಮೆಯ ಸುಪುತ್ರ ಡಾ. ಭೀಮ್ ರಾವ್ ಅಂಬೇಡ್ಕರ್ ರವರ 135ನೇ ಜಯಂತಿಯನ್ನು ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಗದ್ದಿಬಸಪ್ಪ, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಆರ್.ಎಚ್. ಸಾಗರ್ ಅಧ್ಯಕ್ಷರು, ಶ್ರೀ ಎನ್. ಶೇಖರ್, ಕಾರ್ಯದರ್ಶಿಗಳು, ಶ್ರೀಮತಿ ಪ್ರಭಾವತಿ ಸರ್ದಾರ್, ಜಿಲ್ಲಾ ಸ್ಥಾನೀಕ ಆಯುಕ್ತರು (ಗೈ), ಶ್ರೀಮತಿ ಶಕುಂತಲಾ, ಜಿಲ್ಲಾ ತರಬೇತಿ ಆಯುಕ್ತರು (ಗೈ), ಶ್ರೀ ಅಂಬಣ್ಣ ನಾಯಕ, ಎಸ್.ಜಿ.ವಿ. ಹಾಗೂ ಶಿಕ್ಷಕರು ಉಪಸ್ಥಿತರಿದ್ದರು.

## ಶಿವಮೊಗ್ಗ

ಜಿಲ್ಲಾ ಸಂಸ್ಥೆಯಿಂದ ದಿನಾಂಕ 24.3.2026 ರಂದು ಜಿಲ್ಲಾ ಸ್ಕೌಟ್ ಭವನದಲ್ಲಿ "ಅಂತರಾಷ್ಟ್ರೀಯ ವಿಶ್ವ ಮಹಿಳಾ ದಿನಾಚರಣೆ"ಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀಮತಿ ಶಕುಂತಲಾ ಚಂದ್ರಶೇಖರ್‌ರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆಯ ಶ್ರೀಮತಿ ಸಾಲಮ್ಮ, ಶ್ರೀಮತಿ ಚಿಕ್ಕಹನುಮಕ್ಕ, ಶ್ರೀಮತಿ ನರಸಮ್ಮ, ಶ್ರೀಮತಿ ಲಕ್ಷ್ಮೀ, ಶ್ರೀಮತಿ ನರಸಮ್ಮ ಇವರನ್ನು ಸನ್ಮಾನಿಸಲಾಯಿತು. ಶಿವಮೊಗ್ಗ ಮಹಾ ನಗರ ಪಾಲಿಕೆಯ ಶ್ರೀಮತಿ. ಎಚ್.ಎಸ್. ಪುಷ್ಪಾವತಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಈ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಂತರ ಕಸ

ವಿಲೇವಾರಿ ಮತ್ತು ಪರಿಸರವನ್ನು ಹೇಗೆ ಸ್ವಚ್ಛವಾಗಿ ಇಟ್ಟುಕೊಳ್ಳಬೇಕೆಂದು ತಿಳಿ ಹೇಳಿದರು. ಈ ವಿಷಯವಾಗಿ ಪ್ರತಿಜ್ಞಾವಿಧಿಯನ್ನು ಎಲ್ಲರಿಗೂ ಬೋಧಿಸಿದರು. ಹಸಿ,



ಒಣ ಮತ್ತು ಅಪಾಯಕಾರಿ ತ್ಯಾಜ್ಯಗಳ ಕಸವನ್ನು ಸರಿಯಾಗಿ ವಿಂಗಡಿಸಿ ಸಹಕರಿಸುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು. ಮತ್ತೋರ್ವ ಅತಿಥಿ ಶ್ರೀಮತಿ ಉಷಾ ನಟೇಶ್ ಕಾರಸವರಳ್ಳಿ ಮಾತನಾಡಿ, ಮಕ್ಕಳಿಗೆ ಕಾರ್ಗಿಲ್ ವಿಜಯೋತ್ಸವಕ್ಕೆ ಕಾರಣಕರ್ತರಾದ ಅತಿ ಚಿಕ್ಕವಯಸ್ಸಿನ ಚಿ॥ ಯೋಗೇಂದ್ರ ಯಾದವ್ ಸಿಂಗ್‌ನ (17.5 ವರ್ಷ) ಆತ್ಮಸ್ಥೈರ್ಯ ಅವರಿಗಿದ್ದ ದೇಶ ಪ್ರೇಮದ ಕಥೆಯನ್ನು ಸವಿಸ್ತರವಾಗಿ ಮಕ್ಕಳಿಗೆ ತಿಳಿ ಹೇಳಿ ನೀವು ಮುಂದೆ ಧೈರ್ಯದಿಂದ ಈ ದೇಶಕ್ಕೆ ಮತ್ತು ಕುಟುಂಬಕ್ಕೆ ಒಳಿತನ್ನು ಮಾಡಿ ಎಂದು ಶುಭ ಹಾರೈಸಿದರು. ಸಭೆಯಲ್ಲಿ 110 ರೇಂಜರ್ಸ್, 20 ಗೈಡ್ಸ್, ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಭಾಗವಹಿಸಿದ್ದರು. ಸ್ವಾಗತವನ್ನು ಗೈಡ್ ಆಯುಕ್ತರು ಶ್ರೀಮತಿ ಎಸ್.ಕೆ. ಲಕ್ಷ್ಮೀ ನೆರವೇರಿಸಿದರು. ನಿರೂಪಣೆಯನ್ನು ಎ.ಎಸ್.ಓ.ಸಿ. ಶ್ರೀಮತಿ ಸುಮನ್ ಶೇಖರ್ ಮಾಡಿದರು. ನಂತರ ವಂದನಾರ್ಪಣೆಯನ್ನು ಶ್ರೀಮತಿ ಸಿ.ಎಸ್. ಕಾತ್ಯಾಯಿನಿ ನಡೆಸಿಕೊಟ್ಟರು.

## ತುಮಕೂರು



–ದಿನಾಂಕ : 06.04.2026 ರಿಂದ 08.04.2026ರ ವರೆಗೆ ಸರ್ವೋದಯ ಪ್ರೈಮರಿ ಶಾಲೆಯ ಸ್ಕೌಟ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರವನ್ನು ನಡೆಸಲಾಯಿತು. ಈ ಶಿಬಿರದಲ್ಲಿ ಸುಮಾರು 80 ವಿದ್ಯಾರ್ಥಿಗಳು ಭಾಗವಹಿಸಿದ್ದರು.



–ದಿನಾಂಕ 08.04.26 ರಿಂದ 10.04.26 ರವರಿಗೆ ಸ್ಟೆಲ್ಲಾ ಮೇರಿಶಾಲೆ ತಿಪಟೂರಿನ ಸ್ಕೌಟ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರವನ್ನು ನಡೆಸಲಾಯಿತು. ಈ ಶಿಬಿರದಲ್ಲಿ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿರುತ್ತಾರೆ.

–ದಿನಾಂಕ 10.04.2026 ರಂದು ಶ್ರೀ ಸಿದ್ದಗಂಗಾ ಕಲಾ ವಾಣಿಜ್ಯ ಮತ್ತು ವಿಜ್ಞಾನ ಪ್ರಥಮ ದರ್ಜೆ ಕಾಲೇಜಿನಲ್ಲಿ ನೂತನವಾಗಿ ರೋವರ್ಸ್ ಮತ್ತು ರೇಂಜರ್ಸ್ ಘಟಕವನ್ನು ಉದ್ಘಾಟಿಸಲಾಯಿತು. ಶ್ರೀ ಸಿದ್ದಗಂಗಾ ಶಿಕ್ಷಣ ಸಂಸ್ಥೆಯ






ಕಾರ್ಯದರ್ಶಿಯಾದ ಶ್ರೀ ಟಿ.ಕೆ. ನಂಜುಂಡಪ್ಪನವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಆಶಾ ಪ್ರಸನ್ನಕುಮಾರ್, ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ರಾಜ್ಯ ಉಪಾಧ್ಯಕ್ಷರು, ಶ್ರೀ ಸುರೇಂದ್ರ ಶಾ., ಜಿಲ್ಲಾ ಆಯುಕ್ತರು (ಸ್ಕೌಟ್), ಶ್ರೀ ಈಶ್ವರಯ್ಯ ಜಿಲ್ಲಾ ಸ್ಥಾನಿಕ ಆಯುಕ್ತರು, ಶ್ರೀ ಎನ್. ಯೋಗೇಶ್ವರಪ್ಪ, ಸಿದ್ದಗಂಗಾ ಸಂಯೋಜಕರು, ಕಾಲೇಜಿನ ಪ್ರಾಂಶುಪಾಲರು ಉಪಸ್ಥಿತರಿದ್ದರು.




– ದಿನಾಂಕ 11.04 26 ರಿಂದ 14.04.26 ರ ತನಕ ಸದ್ವಿದ್ಯಾ ಶಾಲೆಯ ಸ್ಕೌಟ್ ಮತ್ತು ಗೈಡ್ಸ್ ವಿದ್ಯಾರ್ಥಿಗಳಿಗೆ ಬೇಸಿಗೆ ಶಿಬಿರವನ್ನು ನಡೆಸಲಾಯಿತು.



– ದಿನಾಂಕ 01.04.2026 ಶ್ರೀ ಶಿವಕುಮಾರ ಸ್ವಾಮೀಜಿಯವರ 119ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲೆಯ ಸ್ಕೌಟ್ ಮತ್ತು ಗೈಡ್ಸ್ ರೋವರ್ಸ್ ಮತ್ತು ರೇಂಜರ್ಸ್, ವಿದ್ಯಾರ್ಥಿಗಳು ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದರು.



– ದಿನಾಂಕ 16.04.2026 ರಂದು ಪಲಗಟ್ಟೆ ಆಡುವಪ್ಪ ಕಾಲೇಜಿನ ರೋವರ್ಸ್ ಮತ್ತು ರೇಂಜರ್ಸ್ ಘಟಕದ ವತಿಯಿಂದ ನೂತನ ವಿದ್ಯಾರ್ಥಿಗಳಿಗೆ ಮಾಹಿತಿ ಕಾರ್ಯಾಗಾರವನ್ನು ನಡೆಸಲಾಯಿತು.

## ವಿಜಯಪುರ



–ದಿನಾಂಕ 14.04.2026 ರಂದು ಎಸ್.ಎಸ್.ಪಿ.ಓ. ಸರಕಾರಿ ಪ್ರಥಮ ದರ್ಜೆ ಕಾಲೇಜು, ಮುದ್ದೇಬಿಹಾಳ ಇಲ್ಲಿ ಭಾರತ ರತ್ನ, ಸಂವಿಧಾನ ಶಿಲ್ಪಿ, ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರು, ಭಾರತದ ಹೆಮ್ಮೆಯ ಪುತ್ರ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮುದ್ದೇಬಿಹಾಳ ನಗರದ ಸಾಹಿತಿ ಶ್ರೀ ಶಿವಪುತ್ರ ಅಜಮನಿ ಇವರು ಕಾರ್ಯಕ್ರಮದ ಕುರಿತು ಮಾತನಾಡುತ್ತಾ "ಸಂವಿಧಾನದ ಮೌಲ್ಯಗಳನ್ನು ಗೌರವಿಸಬೇಕು. ಮಾನವರಾದ ನಾವೆಲ್ಲರೂ ಮಾನವೀಯತೆಯಿಂದ ಜೀವಿಸಬೇಕು ಇನ್ನೊಬ್ಬರನ್ನು ದೂಷಿಸಬಾರದು" ಎಂದು ಹೇಳಿದರು. ನಂತರ ಮುದ್ದೇಬಿಹಾಳದ ಅಗ್ನಿಶಾಮಕ ತಂಡದವರಿಂದ ಅಗ್ನಿ ಅವಘಡದ ಕುರಿತು ಪ್ರಾತಕ್ಷಿಕೆ ನಡೆಯಿತು. ಇದಾದ ಮೇಲೆ ಅಗ್ನಿಶಾಮಕ ವಾಹನದಲ್ಲಿರುವ ವಿವಿಧ ಪರಿಕರಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಶ್ರೀ ರಂಗನಗೌಡ ಬಿರಾದಾರ ಇವರು ನೀಡಿದರು. ಬೆಂಕಿಯ ಅವಘಡಗಳು ನಡೆದಾಗ ಕೈಗೊಳ್ಳುವ ಕ್ರಮಗಳ ಬಗ್ಗೆ ಹಾಗೂ ಬೆಂಕಿಯ ವಿಧಗಳ ಬಗ್ಗೆ ಶ್ರೀ ಸುನೀಲ ನಾಯಕ ಮಾಹಿತಿಯನ್ನು ನೀಡಿದರು. ಅಗ್ನಿಶಾಮಕ ಠಾಣೆಯ ಠಾಣಾಧಿಕಾರಿ ಶ್ರೀ ಬಸವರಾಜ ಬಿರಾದಾರ ಹಾಗೂ ಹವಾಲ್ದಾರ ಶ್ರೀ ಜಾವೇದ ಜಮಖಂಡಿ, ಶ್ರೀ ಸಿದ್ದಣ್ಣ ಪೋಲೇಶಿ, ಶ್ರೀಶೈಲಗೌಡ ಪಾಟೀಲ, ಶ್ರೀ ಸುಭಾಷ ಗೌಡರ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಇದಾದ ಮೇಲೆ 25 ರೋವರ್ ಮತ್ತು ರೇಂಜರ್‌ಗಳಿಗೆ ಬೇಸಿಗೆ ಶಿಬಿರದ ಚಟುವಟಿಕೆಗಳನ್ನು ಪ್ರಾರಂಭಿಸಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ॥ ಹೆಚ್.ಎ. ಕಟಗೂರ, ರೋವರ್ ಸ್ಕೌಟ್ ಲೀಡರ್ ಶ್ರೀ ಮೌನೇಶ, ರೇಂಜರ್ ಲೀಡರ್ ಪ್ರೊ. ವನಿತಾ ಭೀಮಪ್ಪ ದೊಡ್ಡಮನಿ, ಐಕ್ಯೂಎಸಿ ಸಂಯೋಜಕರಾದ ಪ್ರೊ ಪ್ರದೀಪ, ಕ್ರೀಡಾ ದೈಹಿಕ ಶಿಕ್ಷಣ ನಿರ್ದೇಶಕರಾದ ಪ್ರೊ॥ ಎಲ್.ಹೆಚ್. ಮಮದಾಪುರ ಸಾಂಸ್ಕೃತಿಕ ವಿಭಾಗದ ಸಂಯೋಜಕರು ಮತ್ತು ಕಾರ್ಯಕ್ರಮ ನಿರೂಪಕರಾದ ಪ್ರೊ॥ ಹಂಪಣ್ಣ, ಎನ್.ಎಸ್.ಎಸ್ ಅಧಿಕಾರಿಗಳಾದ ಪ್ರೊ॥ ಪರಶುರಾಮ ದೇವಿ, ಪ್ರೊ॥ ಜ್ಯೋತಿ ಕೆ., ಯೂತ್ ರೆಡ್‌ಕ್ರಾಸ್ ಸಂಯೋಜಕರಾದ ಪ್ರೊ॥ ಮುತ್ತಣ್ಣ ಗೌಡರ, ಮಹಿಳಾ ಸಬಲೀಕರಣ ಕೋಶದ ಸಂಯೋಜಕರಾದ ಪ್ರೊ॥ ಧನುಶ್ರೀ, ಪ್ರೊ॥ ಆರ್.ಡಿ. ನಂದಪ್ಪನವರ ಎ.ಎಸ್.ಓ.ಸಿ. ಶ್ರೀ ಡಿ.ಬಿ. ಅತ್ತಾರ ಹಾಗೂ ಕಾಲೇಜಿನ ಎಲ್ಲ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಪ್ರೊ॥ ಮುತ್ತಣ್ಣಗೌಡರ ಎಲ್ಲರನ್ನು ಸ್ವಾಗತಿಸಿದರು. ಪ್ರೊ॥ ಮೌನೇಶ ವಂದಿಸಿದರು. ಕಾರ್ಯಕ್ರಮದಲ್ಲಿ 50ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು.



– ದಿನಾಂಕ 23.03.2026 ರಿಂದ 24.03.2026 ರವರೆಗೆ ಮುದ್ದೇಬಿಹಾಳದ ಸರಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಜಿಲ್ಲಾ ಮಟ್ಟದ ರೋವರ್ ಮತ್ತು ರೇಂಜರ್‌ಗಳ ಮೇಳ ಜರುಗಿತು. ಸದರಿ ಮೇಳವು ಸ್ಕೌಟ್, ಗೈಡ್ ಧ್ವಜಾರೋಹಣದೊಂದಿಗೆ ಪ್ರಾರಂಭವಾಯಿತು. ವಿಜಯಪುರ ಜಿಲ್ಲಾ ಸಂಸ್ಥೆಯ ಅಧ್ಯಕ್ಷರಾದ ಡಾ. ಸತೀಶ ಜಿಗಜಿನ್ನಿ, ಕಾಲೇಜಿನ ಭೂದಾನಿಗಳಾದ ಶ್ರೀ ಗುಲಾಬಚಂದ. ಎಸ್. ಓಸ್ವಾಲ್, ಕಾಲೇಜಿನ ಪ್ರಾಂಶುಪಾಲರಾದ ಡಾ. ಹೆಚ್.ಎ. ಕಟಗೂರ ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ನಂತರ ಮಾತನಾಡಿದ ಡಾ. ಸತೀಶ ಜಿಗಜಿನ್ನಿಯವರು "ತನ್ನ ಸೇವೆ, ಪರರ ಸೇವೆ ಮತ್ತು ದೇವರ ಸೇವೆಯ ಬಗ್ಗೆ ಅರಿತಾಗ ಮಾತ್ರ ಸಮಾಜ ಸುಧಾರಿಸಲು ಸಾಧ್ಯವಿದೆ" ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಸ್ಥಳೀಯ ಸಂಸ್ಥೆಯ ಚೇರ್‌ಮನ್ ಮತ್ತು ನಿವೃತ್ತ ಪ್ರಾಧ್ಯಾಪಕರಾದ ಶ್ರೀ ಎಸ್.ಎಸ್. ಹೂಗಾರ, ಕಾಲೇಜಿನ ಎಲ್ಲ ಪ್ರಾಧ್ಯಾಪಕರುಗಳು ಉಪಸ್ಥಿತರಿದ್ದರು. ಜಿಲ್ಲೆಯ ವಿವಿಧ ಕಾಲೇಜುಗಳಿಂದ 95 ರೋವರ್–ರೇಂಜರ್‌ಗಳು ಭಾಗವಹಿಸಿದ್ದರು. ಸಾಯಂಕಾಲ 5.00 ಗಂಟೆಗೆ ಮುದ್ದೇಬಿಹಾಳ ಪಟ್ಟಣದಲ್ಲಿ ರೋವರ್–ರೇಂಜರ್‌ಗಳಿಂದ ಪಥಸಂಚಲನ ನಡೆಯಿತು. ಎರಡನೆಯ ದಿನ ಬೆಳಿಗ್ಗೆ 6.00 ಗಂಟೆಗೆಬಿ. ಪಿ. ವ್ಯಾಯಾಮ, 7.30ಕ್ಕೆ ಸರ್ವಧರ್ಮ ಪ್ರಾರ್ಥನೆ, 8.00 ಗಂಟೆಗೆ ಧ್ವಜಾರೋಹಣ, 8.30ಕ್ಕೆ ಉಪಹಾರಮುಗಿಸಿ 9.30 ರಿಂದ 1.30 ರವರೆಗೆ ಸ್ಕೌಟ್–ಗೈಡ್ ಚಟುವಟಿಕೆಗಳು ನಡೆದವು. ಸಾಯಂಕಾಲ 4.00 ಗಂಟೆಗೆ ಸಮಾರೋಪ ಸಮಾರಂಭ ನೆರವೇರಿತು. ಧ್ವಜಾವರೋಹಣದೊಂದಿಗೆ ಶಿಬಿರವು ಮುಕ್ತಾಯಗೊಂಡಿತು.



ಜ್ಯೋತಿರ್ಲಿಂಗದಲ್ಲಿ ಒಂದಾದ ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಜಾತ್ರಾ ಮಹೋತ್ಸವದಲ್ಲಿ ದಿನಾಂಕ 15/03/2026 ರಿಂದ 19/03/2026 ರವರೆಗೆ ಭ್ರಮರಾಂಭ ಅತಿಥಿ ಗೃಹದ ಹತ್ತಿರ ಜಾತ್ರೆಗೆ ಬಂದಂತಹ ಭಕ್ತಾದಿಗಳಿಗೆ ವಿಜಯಪುರ ಜಿಲ್ಲೆಯ ನಿಡಗುಂದಿಪಟ್ಟಣದ ಸಾರ್ವಜನಿಕರಿಂದ ಸತತ 25 ವರ್ಷಗಳಿಂದ ಲಿಂಬು ಶರಬತ್ ವಿತರಿಸುವ ಸೇವೆ ನಡೆಯುತ್ತಿದೆ. ಶ್ರೀ ಶಂಕರಭಜಂತ್ರಿ ಎಲ್.ಟಿ. (ಸೌ) ಹಾಗೂ ನಿಡಗುಂದಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ಇವರು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆ ನಿಡಗುಂದಿಗೂ ಸಾರ್ವಜನಿಕರ ಜೊತೆಗೂಡಿ ಸೇವೆಯನ್ನು ಸಲ್ಲಿಸಿರುತ್ತಾರೆ.

ವಿಜಯನಗರ

## ಚಿಕ್ಕಮಗಳೂರು



ದಿನಾಂಕ 23–3–26 ರಿಂದ 29–03–26 ರವರೆಗೆ ಎನ್ ಡಿ ಎಂ ಎ ರವರ ಸಹಯೋಗದೊಂದಿಗೆ ಚಿಕ್ಕಮಗಳೂರು ಜಿಲ್ಲಾ ಸಂಸ್ಥೆಯಲ್ಲಿ ಯುವ ಆಪದ್ ಮಿತ್ರ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಶಿಬಿರವನ್ನು ಮಾನ್ಯ ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎನ್ ನಾಗರಾಜ್ ರವರು ಉದ್ಘಾಟಿಸಿ ವಿದ್ಯಾರ್ಥಿಗಳಿಗೆ ಉಪಯುಕ್ತ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ರಾಜ್ಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಎ ಎನ್ ಮಹೇಶ್, ಜಿಲ್ಲಾ ಸಂಸ್ಥೆಯ ಮುಖ್ಯ ಆಯುಕ್ತರಾದ ಶ್ರೀ ಎಂ ಎನ್ ಷಡಕ್ಷರಿ ಹಾಗೂ ಗೈಡ್ ಆಯುಕ್ತರಾದ ಶ್ರೀಮತಿ ಮಮತಾ, ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ನೀಲಕಂಠಾಚಾರ್ಯ, ಜಿಲ್ಲಾ ತರಬೇತಿ ಆಯುಕ್ತರಾದ ಶ್ರೀಮತಿ ಸಂಧ್ಯಾ ರಾಣಿ ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಶ್ರೀಮತಿ ಲತಾ ಮಂಜುನಾಥ್, ಜಿಲ್ಲಾ ಸಂಘಟಕ ಶ್ರೀ ಬಿ.ಎನ್. ಕಿರಣ್ ಕುಮಾರ್ ಹಾಗೂ ಶ್ರೀ ರಕ್ಷಿತ್ ಬಾಳೂರು ಇತರರು ಉಪಸ್ಥಿತರಿದ್ದರು. ಶಿಬಿರದಲ್ಲಿ 40 ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು.

**ಏಪ್ರಿಲ್ 2026ರಲ್ಲಿ ವಿವಿಧ ಜಿಲ್ಲೆಗಳಲ್ಲಿ ನಡೆದ ಬೇಸಿಗೆ ಶಿಬಿರದ ವಿವಿಧ ಚಟುವಟಿಕೆಗಳಲ್ಲಿ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್‌ಗಳು ಭಾಗವಹಿಸಿರುವುದು.**



























RNI No: 13348/1959. Title Code: KARBIL00285. Posted at Periodical Rate Rs. 2/-
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 28)

SHAHEEN GROUP OF INSTITUTIONS

37 Years of SHAPING FUTURE WITH EXCELLENCE

Shaheen Group of Institutions

FLAGSHIP PROGRAMMES 2026

MADRASA PLUS مدرسہ پلس

Strengthening Madrasa Students and Madrasas through Academic Support

PRE PLUS TWO پری پلس 2

*Class X*
*Pass or Fail – Don't Worry*
In just 3 Years, Become a **Doctor, Engineer** or pursue any professional career

MBBS کی تعلیم بیرون ملک
STUDY MBBS ABROAD

Become a Doctor at just **28.8 Lakhs** Including Food and Hostel

پانچ سالہ انٹیگریٹ پروگرام
5 YEARS INTEGRATED PROGRAMME

Class 11 & 12 Arts & Commerce with **BA / BCA / BCom** Along with Alimiyath

SHAHEEN AUSTRALIAN INTERNATIONAL SCHOOL شاہین آسٹریلین انٹرنیشنل اسکول

Residential School for Classes 5 to 8

DEENIYAT PLUS دینیات پلس

A blended educational model of religious and contemporary education for dropouts and needy children

ADMISSIONS OPEN From 1st April 2026

For more details visit
shaheengroup.org
Toll Free: 1800 121 6235

If not delivered, please return to :
THE EDITOR, Karnataka Scout & Guide
State Headquarters, Shanthi Gruha
#39, Palace Road, Bengaluru - 560 001
Ph.: 080-22260017, 22267470
e-mail.: info@bsgkarnataka.org
www.bsgkarnataka.in

Published, Editor & Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Rd, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001
Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru-26